ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಮೇ 13, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 361 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999




## ನೇರಳೆ ತಾಕಿನಲ್ಲಿ ಪಾರಂಪರಿಕ ಬೀಜದ ಸಂತೆ





ದಾವಣಗೆರೆ, ಮೇ 12 - ನಗರದ ತರಳಬಾಳು ಕೃಷಿ ವಿಜ್ಞಾನ ಕೇಂದ್ರವು ಭಾನುವಾರದಂದು ಪಾರಂಪರಿಕ ಬೀಜದ ವಿಶಿಷ್ಟ ಸಂತೆಗೆ ಸಾಕ್ಷಿಯಾಯಿತು.

ಕೇಂದ್ರದಲ್ಲಿರುವ ಜಂಬುನೇರಳೆ ತಾಕಿನ ನೆರಳಿನಲ್ಲಿ ದೂರದ ರಾಜ್ಯಗಳಿಂದ ಬಂದಿದ್ದ ಪಾರಂಪರಿಕ ಬೀಜ ಮಾರಾಟಗಾರರು ಹಾಗೂ ದೂರದ ಊರುಗಳಿಂದ ಬಂದ ಖರೀದಿದಾರರು ಸಂಗಮಿಸಿದ್ದರು.

ಹರಿಯಾಣ, ತಮಿಳುನಾಡು, ಅಸ್ಸಾಂ, ಒಡಿಶಾಗಳಿಂದಲೂ ಮಾರಾಟಗಾರರು ಆಗಮಿಸಿದ್ದರು. ತಮ್ಮ ಸ್ಥಳೀಯ ಪರಂಪರೆಯ ಬಿತ್ತನೆ ಬೀಜಗಳನ್ನು ಮಾರಾಟ ಮಾಡಿದರು.

ಹರಿಯಾಣದ ಸೋನಿಪತ್‌ನಿಂದ ಬಂದಿದ್ದ ಕೃಷಿಕ ರಾಜೇಶ್ ಅವರು 3 ಅಡಿ ಹೀರೇಕಾಯಿ ಫಲ ನೀಡುವ ಬೀಜ, 5 ಅಡಿ ಉದ್ದನೆಯ ಸೋರೆಕಾಯಿ ಬೀಜಗಳನ್ನು ಮಾರಾಟಕ್ಕೆ ತಂದಿದ್ದರು. ಒಂದೂಕಾಲು ಅಡಿ ಉದ್ದ ಬೆಳೆಯುವ ಮೆಣಸಿನ ಕಾಯಿ ಬೀಜವನ್ನೂ ತಂದಿದ್ದರು.

ಹಾವೇರಿ ಜಿಲ್ಲೆ ಇಟಗಿಯ ಭೂಮಿಕಾ ರೈತ ಉತ್ಪಾದಕರ ಸೌಹಾರ್ದ ಸಹಕಾರಿ ಸಂಘದವರು ವಿವಿಧ ರೀತಿ ರಾಗಿ ಬೀಜಗಳನ್ನು ಮಾರಾಟಕ್ಕೆ ತಂದಿದ್ದರು.

ಹೈಬ್ರಿಡ್‌ನಲ್ಲಿ ಅಷ್ಟೇ ಅಲ್ಲದೇ, (4ನೇ ಪುಟಕ್ಕೆ)

### ಸಂತೋಷದ ಸ್ಪಂದನೆ

ಪಾರಂಪರಿಕ ಬೀಜದ ಸಂತೆಗೆ ರೈತರು ಹಾಗೂ ಕೈತೋಟದವರಿಂದ ಸಂತೋಷದ ಸ್ಪಂದನೆ ಸಿಕ್ಕಿದೆ. ಮುಂದಿನ ದಿನಗಳಲ್ಲೂ ತರಳಬಾಳು ಕೃಷಿ ಕೇಂದ್ರದಿಂದ ಪಾರಂಪರಿಕ ಬೀಜಕ್ಕೆ ಉತ್ತೇಜನ ಮುಂದುವರೆಸಲಾಗುವುದು ಎಂದು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಟಿ.ಎನ್.ದೇವರಾಜ ಹೇಳಿದ್ದಾರೆ.

ಪಾರಂಪರಿಕ ಬೀಜದ ಸಂತೆಯಲ್ಲಿ 3 ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದಾರೆ. 400-600 ಜನ ಕೈತೋಟದ ತರಬೇತಿ ಪಡೆದಿದ್ದಾರೆ ಎಂದವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಬೀಜ ಸಂರಕ್ಷಕರ ಸಂಘ ಹಾಗೂ ಕೈತೋಟ ಬೆಳೆಗಾರರ ಸಂಘಗಳನ್ನು ಉದ್ಘಾಟಿಸಲಾಗಿದೆ. ಈ ಮೂಲಕ ಪಾರಂಪರಿಕ ಬೀಜಗಳಿಗೆ ಇನ್ನಷ್ಟು ಉತ್ತೇಜನ ಸಿಗಲಿದೆ ಎಂದವರು ತಿಳಿಸಿದರು.

### ಬೀಜ ಸಂರಕ್ಷಣೆ ಸಾಂಪ್ರದಾಯಿಕ ಪದ್ಧತಿಯನ್ನೇ ಬಿಟ್ಟಿದ್ದೇವೆ

ರೈತರು ಸಾಂಪ್ರದಾಯಿಕವಾಗಿ ಬೀಜ ಸಂರಕ್ಷಣೆ ಮಾಡುವ ಪದ್ಧತಿಯನ್ನೇ ಬಿಟ್ಟಿದ್ದಾರೆ. ಮಡಿಕೆಯಲ್ಲಿ ಸಂರಕ್ಷಣೆ ಮಾಡುವ ಬೀಜ ವರ್ಷ ಕಾಲ ಸುರಕ್ಷಿತವಾಗಿರುತ್ತದೆ ಹಾಗೂ ಆರೋಗ್ಯಕ್ಕೂ ಉತ್ತಮ ಎಂದು ವಿಜಯನಗರ ಜಿಲ್ಲೆಯ ಉತ್ತಂಗಿ ಗ್ರಾಮದ ಕಾಟ್ರಹಳ್ಳಿ ಕಲ್ಲಪ್ಪ ಹೇಳುತ್ತಾರೆ.

ರಾಸಾಯನಿಕ ಹಾಕಿ ಬೀಜ ರಕ್ಷಿಸಬಹುದು. ಆದರೆ, ಹೀಗೆ ಮಾಡಿದಾಗ ಬೀಜದಲ್ಲಿ ರಾಸಾಯನಿಕ ಸೇರುತ್ತದೆ. ಬೀಜ ಅಂಕುರವಾಗುವುದು ಕಷ್ಟ ಎಂದವರು ಅಭಿಪ್ರಾಯ ಪಡುತ್ತಾರೆ.

ದೇಸಿ ಬಿತ್ತನೆ ಬೀಜ ಬೇಕು ಎಂದು ಬೆಂಗಳೂರಿನ ಮಾಗಡಿಯ ರೈತ ದೇವರಾಜ ಅವರು ಇಲ್ಲಿಗೆ ಬಂದಿದ್ದರು.

ನಮ್ಮ ಕಡೆ ಶುದ್ಧ ನಾಟಿ ಬೀಜ ಸಿಗುವುದಿಲ್ಲ. ಆರೋಗ್ಯಕರ ಆಹಾರಕ್ಕೆ ದೇಶಿ ಪರಂಪರೆಯ ಬೀಜಗಳೇ ಸೂಕ್ತ ಎಂದವರು ತಿಳಿಸಿದರು.

## ನೋಟಾಗೆ ಶೇ.50ರಷ್ಟು ಮತ ಬಂದರೆ ಕಾನೂನು ಪರಿಣಾಮ ಸಾಧ್ಯ : ರಾವತ್



ಈಗಿರುವ ಪರಿಸ್ಥಿತಿಯಲ್ಲಿ ನೋಟಾ ಕೇವಲ ಸಾಂಕೇತಿಕವಾಗಿದೆ. ಇದರಿಂದ ಫಲಿತಾಂಶದ ಮೇಲೆ ಪರಿಣಾಮವಾಗುವುದಿಲ್ಲ: ರಾವತ್

ಇಂದೋರ್, ಮೇ 12 - ನೋಟಾಗೆ ಶೇ.50ಕ್ಕೂ ಹೆಚ್ಚು ಮತಗಳು ದೊರೆತರೆ ಫಲಿತಾಂಶದ ಮೇಲೆ ಕಾನೂನಾತ್ಮಕವಾಗಿ ಪರಿಣಾಮ ಬೀರಲು ಸಾಧ್ಯ ಎಂದು ಮಾಜಿ ಚುನಾವಣಾ ಆಯುಕ್ತ ಒ.ಪಿ. ರಾವತ್ ಹೇಳಿದ್ದಾರೆ.

ಶೇ.99ರಷ್ಟು ಮತಗಳು ನೋಟಾಗೆ ಬಂದರೂ ಸಹ, ಫಲಿತಾಂಶದ ಮೇಲೆ ಪರಿಣಾಮ ಆಗುವುದಿಲ್ಲ. ಒಂದು ಮತ ಪಡೆದ ಅಭ್ಯರ್ಥಿಯೇ ಗೆಲ್ಲುತ್ತಾನೆ ಎಂದು ನಿಯಮಗಳು ಹೇಳುತ್ತವೆ ಎಂದು ರಾವತ್ ಹೇಳಿದ್ದಾರೆ.

ಮಧ್ಯಪ್ರದೇಶದ ಇಂದೋರ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಮ್ ಅವರು ನಾಮಪತ್ರ ವಾಪಸ್ ಪಡೆಯುವ ಕೊನೆಯ ದಿನದಂದು ಕಣದಿಂದ ಹಿಂದೆ ಸರಿದಿದ್ದರು. ನಂತರ ಅವರು ಬಿಜೆಪಿ ಸೇರಿದ್ದರು.

ಈ ಹಿನ್ನೆಲೆಯಲ್ಲಿ ಮೇ 13ರಂದು ನಡೆಯಲಿರುವ ಚುನಾವಣೆಯಲ್ಲಿ ಜನರು ನೋಟಾಗೆ ಮತದಾನ ಮಾಡಬೇಕು ಎಂದು ಕಾಂಗ್ರೆಸ್ ಕರೆ ನೀಡಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿರುವ ರಾವತ್, ಈಗಿರುವ ಪರಿಸ್ಥಿತಿಯಲ್ಲಿ ನೋಟಾ ಕೇವಲ ಸಾಂಕೇತಿಕವಾಗಿದೆ. ಇದರಿಂದ ಫಲಿತಾಂಶದ ಮೇಲೆ ಪರಿಣಾಮವಾಗುವುದಿಲ್ಲ ಎಂದಿದ್ದಾರೆ.

100 ಮತಗಳಲ್ಲಿ 99 ನೋಟಾಗೆ ಹೋಗಿ, ಒಬ್ಬರು ಮಾತ್ರ ಅಭ್ಯರ್ಥಿಗೆ ಮತ ಚಲಾಯಿಸಿದರೂ ಅವರು ಗೆಲ್ಲುತ್ತಾರೆ ಎಂದು ರಾವತ್ ಹೇಳಿದ್ದಾರೆ.

ಆದರೂ, ಶೇ.50ಕ್ಕಿಂತ ಹೆಚ್ಚು ಮತದಾರರು ನೋಟಾಗೆ ಮತ ನೀಡಿದರೆ ಪರಿಸ್ಥಿತಿ ಬದಲಾಗಲು ನೆರವಾಗಲಿದೆ. ಸಂಸತ್ತು ಹಾಗೂ ಚುನಾವಣಾ ಆಯೋಗಗಳು ನೋಟಾ (4ನೇ ಪುಟಕ್ಕೆ)

## ಉಕ್ರೇನ್ ಮೇಲೆ ರಷ್ಯಾ ತೀವ್ರ ದಾಳಿ

ವಿಲ್ಚಾ, ಮೇ 12 – ಉಕ್ರೇನ್‌ನ ಈಶಾನ್ಯ ನಗರಗಳು ಹಾಗೂ ಹಳ್ಳಿಗಳ ಮೇಲೆ ರಷ್ಯಾ ಫಿರಂಗಿ ದಾಳಿ ನಡೆಸಿದೆ. ಇದರಿಂದಾಗಿ ಸಾವಿರಾರು ನಾಗರಿಕರು ಮನೆಗಳನ್ನು ಬಿಟ್ಟು ತೆರಳಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಹೋರಾಟ ತೀವ್ರವಾದ ನಂತರ ಉಕ್ರೇನ್‌ನ ಕನಿಷ್ಠ ಒಂದು ಘಟಕ ಖಾರ್ಕೀವ್ ವಲಯದಿಂದ ಹಿಂದೆ ಸರಿದಿದೆ. ಸುಮಾರು 17 ಸಾವಿರ ಜನರಿರುವ ವೊವಚಾನ್ಸ್ಕ್‌ನಲ್ಲಿ ಸಂಘರ್ಷ ತೀವ್ರವಾಗಿದೆ. ಈ ಪ್ರದೇಶದಲ್ಲಿ ಪಾಶ್ಚಾತ್ಯ ದೇಶಗಳಿಂದ ಶಸ್ತ್ರಾಸ್ತ್ರ ಬರಬೇಕಿದೆ. ಅದಕ್ಕೆ ಮೊದಲೇ ದಾಳಿಗೆ ರಷ್ಯಾ ಮುಂದಾಗಿದೆಂದು ಯುದ್ಧ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

## ಪ್ರಜ್ವಲ್ ಪ್ರಕರಣ : ಇಬ್ಬರ ಬಂಧನ

ಬೆಂಗಳೂರು, ಮೇ 12 – ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್.ಐ.ಟಿ.) ಇಬ್ಬರನ್ನು ಬಂಧಿಸಿದೆ.

ಚೇತನ್ ಹಾಗೂ ಲಿಖಿತ್ ಗೌಡ ಬಂಧಿತರಾಗಿದ್ದು, ಇವರು ಬಿಜೆಪಿ ಜೊತೆ ಒಡನಾಟ ಹೊಂದಿದ್ದಾರೆ ಎಂದು ತಿಳಿಸಲಾಗಿದೆ. ಉಭಯರು ಪ್ರಕರಣಕ್ಕೆ ಸಂಬಂಧಿಸಿದ ವಿಡಿಯೋಗಳನ್ನು ಹರಡಿದ್ದಾರೆ ಎಂದು ಆರೋಪಿಸಲಾಗಿದೆ. ಉಭಯರಿಂದ ಹೇಳಿಕೆಗಳನ್ನು ಪಡೆಯಲಾಗಿದೆ.

## ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಸಂಘರ್ಷದಲ್ಲಿ ಪೊಲೀಸ್ ಸಾವು



ಇಸ್ಲಾಮಾಬಾದ್, ಮೇ 12 – ಗೋಧಿ ಹಿಟ್ಟು ಹಾಗೂ ವಿದ್ಯುತ್ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ನಡೆದ ಘರ್ಷಣೆಯಲ್ಲಿ ಓರ್ವ ಪೊಲೀಸ್ ಅಧಿಕಾರಿ ಸಾವನ್ನಪ್ಪಿದ್ದಾರೆ.

ಘರ್ಷಣೆಯಲ್ಲಿ ನೂರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಇವರಲ್ಲಿ ಬಹುತೇಕರು ಪೊಲೀಸರಾಗಿದ್ದಾರೆ.

ಸಬ್ ಇನ್ಸ್‌ಪೆಕ್ಟರ್ ಅದ್ನಾನ್ ಕುರೇಶಿ ಗುಂಡೇಟಿಗೆ ಸಿಲುಕಿ ಸಾವನ್ನಪ್ಪಿರುವುದಾಗಿ ಮೀರಪುರದ ಎಸ್ಪಿ ಕಮ್ರಾನ್ ಅಲಿ ತಿಳಿಸಿದ್ದಾರೆ.

ಬೆಲೆ ಏರಿಕೆಯನ್ನು ಪ್ರತಿಭಟಿಸಿ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಈ ವೇಳೆ ಭದ್ರತೆಗಾಗಿ ನಿಯೋಜಿಸಲಾಗಿದ್ದ ಪೊಲೀಸರ ಜೊತೆ ಪ್ರತಿಭಟನಾಕಾರರು ಘರ್ಷಣೆ ನಡೆಸಿದ್ದಾರೆ.

## ಶಾಮನೂರಿನಲ್ಲಿ ಇಂದು ಕಲ್ಲಳ್ಳಿ ನಾಗರಾಜ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ



43ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರಾದ **ಶ್ರೀ ಕಲ್ಲಳ್ಳಿ ನಾಗರಾಜ್ ಶಾಮನೂರು** ಅವರು ದಿನಾಂಕ 11.05.2024ರ ಶನಿವಾರ ನಿಧನರಾಗಿದ್ದು, ಶಾಮನೂರು ಹಾಗೂ ಹೊಸಕುಂದವಾಡ ಗ್ರಾಮಸ್ಥರಿಂದ ನಾಗರಾಜ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮವನ್ನು ದಿನಾಂಕ 13.05.2024ರ ಸೋಮವಾರ ಸಂಜೆ 5.30 ಗಂಟೆಗೆ ಶಾಮನೂರಿನ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ.






# ದೇಶ ಕಾಯುವ ಯೋಧ ದೇವರ ಸಮ : ಬಸವರಾಜ

## ಹರಪನಹಳ್ಳಿ : ನಿವೃತ್ತ ಯೋಧರಾದ ಚಂದ್ರಪ್ಪ, ಸಂತೋಷ್ ಅವರಿಗೆ ಸ್ವಾಗತ, ಸನ್ಮಾನ



ಹರಪನಹಳ್ಳಿ, ಮೇ 12- ಸೇವಾ ನಿವೃತ್ತಿ ಹೊಂದಿದ ಬಳಿಕ ಗ್ರಾಮಕ್ಕೆ ಆಗಮಿಸಿದ ಸೈನಿಕರಾದ ಚಂದ್ರಪ್ಪ ಹಾಗೂ ಸಂತೋಷ್ ಕುಮಾರ್ ಅವರಿಗೆ ಅದ್ಧೂರಿ ಸ್ವಾಗತ ನೀಡಲಾಯಿತು.

ತಾಲ್ಲೂಕಿನ ಹಲವಾಗಲು ಗ್ರಾಮದ ವಿಶ್ವಚೇತನ ಸಂಘಟನೆಯ ನೇತೃತ್ವದಲ್ಲಿ ನಿವೃತ್ತ ಸೈನಿಕರನ್ನು ಆತ್ಮೀಯವಾಗಿ ಬರಮಾಡಿಕೊಂಡು ಗ್ರಾಮದಲ್ಲಿ ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು.

ಈ ವೇಳೆ ವಿಜಯನಗರ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್ ಮಾತನಾಡಿ, ದೇಶದೊಳಗಿನ ಜನರ ಸುರಕ್ಷತೆ ಕಾಪಾಡುವ ಯೋಧರು ದೇವರಿಗೆ ಸರಿಸಮಾನರು. ದೇಶದ ರಕ್ಷಣೆಗಾಗಿ ಸೇನೆಗೆ ಸೇರಿ ಮಳೆ, ಗಾಳಿ, ಶೀತ ಲೆಕ್ಕಿಸದೇ ಪ್ರಾಣ ಪಣಕ್ಕಿಟ್ಟು ಹೋರಾಟ ಮಾಡುವ ಸೈನಿಕರನ್ನು ಪ್ರತಿಯೊಬ್ಬರು ಗೌರವಿಸಬೇಕು ಎಂದರು.

ಸೈನಿಕರು ನಿವೃತ್ತಿ ಹೊಂದಿದ ಬಳಿಕ ಸಮಾಜಮುಖಿ ಕಾರ್ಯದಲ್ಲಿ ತೊಡಗುವ ಜತೆಗೆ ಯುವಕರಿಗೆ ಮಾರ್ಗದರ್ಶನ ಮಾಡುತ್ತಾ ಸುಂದರ ಸಮಾಜ ನಿರ್ಮಿಸಬೇಕು ಎಂದು ಹೇಳಿದರು.

ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಎಚ್.ಟಿ. ವನಜಾಕ್ಷಮ್ಮ ಮಾತನಾಡಿ, ಸೈನಿಕರ ಪರಿಶ್ರಮದಿಂದ ದೇಶದ ಜನ ಸುಖ-ಸಂತೋಷದಿಂದ ಇರಲು ಸಾಧ್ಯ. ಆತಂಕವಾದಿಗಳು ಮತ್ತು ನೈಸರ್ಗಿಕ ವಿಕೋಪದಿಂದ ನಮ್ಮನ್ನು ರಕ್ಷಿಸಲು ಯೋಧರು ಸದಾ ಮುಂದಿರುತ್ತಾರೆ ಎಂದರು.

ಯೋಧರು ದೇಶದ ಸಂಪತ್ತು. ಅವರಲ್ಲಿರುವ ದೇಶಾಭಿಮಾನ ಭದ್ರತೆಗೆ ಸಾಕ್ಷಿಯಾಗಿದೆ. ಆದ್ದರಿಂದ ಯುವಕರು ದೇಶಸೇವೆಗೆ ಮುಂದೆ ಬರಬೇಕು ಎಂದು ಯುವಕರಿಗೆ ಸಲಹೆ ನೀಡಿದರು.

ಸೈನಿಕರಾದ ಚಂದ್ರಪ್ಪ ಹಾಗೂ ಸಂತೋಷ್ ಕುಮಾರ್ ಮಾತನಾಡಿ, ತಂದೆ-ತಾಯಿ ಮಕ್ಕಳನ್ನು ಬಿಟ್ಟು ಸೈನಿಕರಾಗಿ ದೇಶ ಸೇವೆ ಮಾಡಿದ್ದಕ್ಕೆ ಇಂದು ನಿಜವಾದ ಗೌರವ ಸಿಕ್ಕಿದೆ, ನಾವು ಸೇನೆಯಿಂದ ಮಾತ್ರ ನಿವೃತ್ತಿ ಆಗಿದ್ದೇವೆ. ಆದರೆ ದೇಶ ಸೇವೆಗೆ ಸದಾ ಸಿದ್ಧ ಎಂದರು.

ಜಿಲ್ಲೆಯಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸೇನೆಗೆ ಸೇರಬೇಕು ಎಂದು ನಿವೃತ್ತ ಯೋಧ ಆನಂದ್ ಆಶಯ ವ್ಯಕ್ತಪಡಿಸಿದರು..

ಸಾಹಿತಿ ಇಸ್ಮಾಯಿಲ್ ಎಲಿಗಾರ್, ಗ್ರಾ.ಪಂ. ಮಾಜಿ ಅಧ್ಯಕ್ಷ ದ್ಯಾಮಪ್ಪ, ಲಿಂಗರಾಜ್, ಮುಖಂಡ ಮಾಲತೇಶ್ ಮಾರೇಗೌಡ, ನಿಲಯಪಾಲಕ ಎನ್.ಜಿ. ಬಸವರಾಜ ಹಾಗೂ ಗ್ರಾಮದ ಮುಖಂಡರು ಇದ್ದರು.

# ಎಸ್ಸೆಸ್ಸೆಲ್ಸಿ : ರಾಣೇಬೆನ್ನೂರಿನ ಆಕ್ಸ್‌ಫರ್ಡ್ ಶಾಲೆಗೆ ಶೇ.92 ರಷ್ಟು ಫಲಿತಾಂಶ







ರಾಣೇಬೆನ್ನೂರು, ಮೇ 12- ನಗರದ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.92.30 ರಷ್ಟು ಫಲಿತಾಂಶ ಬಂದಿದ್ದು, ವಿದ್ಯಾರ್ಥಿ ಕಿಶನ್ ಆರ್.ನಸಲ್ ವಾಯ್ಕರ್ - 613 (ಶೇ.98.08) ಅಂಕ ಪಡೆದು ರಾಣೇಬೆನ್ನೂರು ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿರುತ್ತಾನೆ. ಮೊಹಮ್ಮದ್ ಆಫ್ರಿದ್ ಎಸ್. ಹಿರೇಬಿದರಿ - 580 (ಶೇ.92.80) ದ್ವಿತೀಯ ಸ್ಥಾನ ಹಾಗೂ ಸುಮನ್ ಹೆಬ್ಬಳ್ಳಿ - 577 (ಶೇ.92.32) ಅಂಕಗಳು ಪಡೆದು ತೃತೀಯ ಸ್ಥಾನ ಪಡೆದಿರುತ್ತಾರೆ.

ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೂ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಆರ್. ಎಸ್.ರಂಗರೆಡ್ಡಿ ಅಭಿನಂದಿಸಿದ್ದಾರೆ.

# ಸರ್ಕಾರ ಉಚಿತ ಕೊಡುಗೆ ನೀಡುವ ಬದಲಿಗೆ ಜನರಿಗೆ ದುಡಿಮೆಯ ಮಾರ್ಗ ತೋರಿಸಬೇಕು

## ಮಲೇಬೆನ್ನೂರು : ಸಾಮೂಹಿಕ ವಿವಾಹ ಸಮಾರಂಭದಲ್ಲಿ ರಟ್ಟಿಹಳ್ಳಿ ಶ್ರೀ ಅಭಿಮತ



ಮಲೇಬೆನ್ನೂರು, ಮೇ 12- ಆರ್ಥಿಕ ಹೊರೆ ತಗ್ಗಿಸುವ ಸಾಮೂಹಿಕ ವಿವಾಹಗಳು ಸಮಾಜದಲ್ಲಿ ಹೆಚ್ಚಾಗಬೇಕು. ಆ ಮೂಲಕ ದುಂದು ವೆಚ್ಚದ ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕಬೇಕೆಂದು ರಟ್ಟಿಹಳ್ಳಿ ಕಬ್ಬಿಣ ಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅವರು, ಶುಕ್ರವಾರ ಮಲೇಬೆನ್ನೂರು ಪಟ್ಟಣದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ವತಿಯಿಂದ ಆಂಜನೇಯ ಸ್ವಾಮಿ ರಥೋತ್ಸವ ಹಾಗೂ ಬಸವ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ 18ನೇ ವರ್ಷದ ಸಾಮೂಹಿಕ ವಿವಾಹ ಮಹೋತ್ಸವವನ್ನು ದೀಪ ಬೆಳಗಿಸಿ, ಉದ್ಘಾಟಿಸಿ ಮಾತನಾಡಿದರು.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ವಧು-ವರರು ಅತ್ತೆ-ಮಾವರನ್ನು ತಂದೆ-ತಾಯಿಯಂತೆ ನೋಡಿ ಕೊಳ್ಳಬೇಕು. ಉತ್ತಮ ಸಂತತಿಯನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಬೇಕೆಂದು ಹೇಳಿದರು.

'ಕನ್ಯೆ ಕೊಡುವವರು ಮನೆ, ಅಡಿಕೆ ತೋಟ ಇರಬೇಕು.' 'ತಂದೆ-ತಾಯಿ ಇರಬಾರದೆಂಬ' ಮನೋಭಾವನೆಯಿಂದ ಹೊರಬಂದು ವಿಶಾಲ ಮನಸ್ಸಿನಿಂದ ಕನ್ಯಾದಾನ ಮಾಡಬೇಕೆಂದು ಹೆಣ್ಣುಮಕ್ಕಳ ತಂದೆ-ತಾಯಿಗಳಿಗೆ ಸ್ವಾಮೀಜಿ ಕಿವಿಮಾತು ಹೇಳಿದರು.

ಸರ್ಕಾರ ಉಚಿತ ಕೊಡುಗೆಗಳನ್ನು ನೀಡುವ ಬದಲಿಗೆ ಜನರಿಗೆ ದುಡಿಮೆಯ ಮಾರ್ಗ ತೋರಿಸಬೇಕೆಂದು ರಟ್ಟಿಹಳ್ಳಿ ಸ್ವಾಮೀಜಿ ಸರ್ಕಾರಕ್ಕೆ ಮನವಿ ಮಾಡಿದರು.

ಚಿತ್ರದುರ್ಗ ಕುಂಬಾರ ಗುರುಪೀಠದ ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ ಅಧ್ಯಕ್ಷ ಕಣ್ಣಾಳ್ ಧರ್ಮಣ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ಜಿ.ಪಂ. ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಂದಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ವೀರಯ್ಯ ಮಾತನಾಡಿದರು.

ದೇವಸ್ಥಾನ ಕಮಿಟಿ ಉಪಾಧ್ಯಕ್ಷ ಮುದೇಗೌಡ್ರ ಬಸವರಾಜಪ್ಪ, ಖಜಾಂಚಿ ಪೂಜಾರ್ ಗಂಗೇನಳ್ಳಪ್ಪ, ಗಂಗಾಮತ ಸಮಾಜದ ಹಿರಿಯ ಮುಖಂಡ ಕಣ್ಣಾಳ್ ಪರಶುರಾಮಪ್ಪ, ತಾ. ಕುರುಬ ಸಮಾಜದ ಅಧ್ಯಕ್ಷ ಪೂಜಾರ್ ಹಾಲೇಶಪ್ಪ, ಗಂಗಾಮತ ಸಂಘದ ಅಧ್ಯಕ್ಷ ಅಡ್ಡಮನೆ ಧರ್ಮಣ್ಣ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಸಾಬೀರ್ ಅಲಿ, ಭೋವಿಕುಮಾರ್, ಭಾನುವಳ್ಳಿ ಸುರೇಶ್, ಕೆ. ಪಿ.ಗಂಗಾಧರ್, ಪಿ.ಆರ್.ರಾಜು, ಪಿ.ಆರ್. ಕುಮಾರ್, ಎಕ್ಕೆಗೊಂದಿ ಕರಿಯಪ್ಪ, ಬೆಣ್ಣೆಹಳ್ಳಿ ಬಸವರಾಜ್, ವರ್ತಕ ಎಂ.ಜಿ.ಗಜಾನನ, ಕಣ್ಣಾಳ್ ನಾಗರಾಜ್, ಪಿ.ಹೆಚ್.ಶಿವಕುಮಾರ್, ಕಣ್ಣಾಳ್ ಹನುಮಂತಪ್ಪ, ಕಡ್ಲೇಗೊಂದಿ ನಾಗರಾಜಪ್ಪ, ಹೊಸಳ್ಳಿ ಶೇಖರಪ್ಪ, ಹಿಂಡಸಘಟ್ಟಿ ತಿಪ್ಪೇಸ್ವಾಮಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಸ್ವಾಗತಿಸಿದರು. ಬೀರಲಿಂಗೇಶ್ವರ ಶಾಲೆಯ ಮುಖ್ಯ ಶಿಕ್ಷಕ ಕರಿಬಸಪ್ಪ ನಿರೂಪಿಸಿದರು.

## ಅಣ್ಣ ಬಸವಣ್ಣ

ನೀ ಜಗಕ್ಕೆ ಬರುವಾಗ
ಬ್ರಾಹ್ಮಣನೆಂದು ಬಂದೆ
ವೀರಶೈವ ಧರ್ಮ ಸ್ಥಾಪಕನಾಗಿ
ಬೆಳೆದು
ವಿಶ್ವ ಗುರುವೆನ್ನಿಸಿಕೊಂಡೆ

ಲೋಕದ ಅಂಕು-
ಡೊಂಕುಗಳನ್ನು
ತಿದ್ದಿ, ಮೂಢ ಜನರ ಎಚ್ಚರಿಸಿ
ಜಗಜ್ಯೋತಿಯಾಗಿ
ಪರಿಣಮಿಸಿದೆ

ಶರಣ-ಶರಣೆಯರ
ಮನಸ್ಸುಗಳೊಂದು ಗೂಡಿಸಿ
ಹೆಣ್ಣು ಗಂಡೆಂಬ ಭೇದವಿಲ್ಲದೆ
ಅನುಭವ ಮಂಟಪ ನೀ ಕಟ್ಟಿದೆ

ಲಿಂಗಾಚಾರ . ಶಿವಾಚಾರ
ಸದಾಚಾರ . ಭೃತ್ಯಾಚಾರ
ಗಣಾಚಾರವೆಂಬ
ಪಂಚಾಚಾರಗಳ
ಸೂತ್ರಧಾರ ನೀನಾದೆ

ಸಾವಿರಾರು ವಚನಗಳು
ನಿನ್ನಿಂದ ಮೂಡಿ ಬಂದವು
ಅವೆಲ್ಲ ಕಾರ್ಯೋನ್ಮುಖದ
ಅನುಭವ ನುಡಿಮುತ್ತುಗಳಾಗಿ
ಹೊರ ಬಿದ್ದವು

ಮಠ, ಮಠಾಧಿಪತಿಗಳು
ನಿನ್ನ ಧ್ಯಾನದಲ್ಲಿ ಹಗಲಿರುಳು
ಜಪಿಸುತ್ತಾ ನೀ ಹಾಕಿದ
ದಾರಿಯಲ್ಲಿ ನಡೆಯುತ್ತಿರುವವು

ನೀ ಮಾಡಿದ ಕಾರ್ಯಗಳು
ಹನ್ನೆರಡನೇ
ಶತಮಾನದಲ್ಲಾದರೂ
ಇಪ್ಪತ್ತೊಂದನೇ ಶತಮಾನದಲ್ಲಿ
ನಿನ್ನ ಹೆಸರು
ಪ್ರಜ್ವಲಿಸುತ್ತಿರುವುದು
ಅಣ್ಣ ಬಸವಣ್ಣ.

**- ಎಸ್.ಸಿದ್ದೇಶ್ ಕುರ್ಕಿ,**
ದಾವಣಗೆರೆ.



## ಕೊಪ್ಪದಲ್ಲಿ ಸಂಭ್ರಮದ ಉಚ್ಛಾಯ

ಮಲೇಬೆನ್ನೂರು, ಮೇ 12 - ಕೊಪ್ಪ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಆಂಜನೇಯ ಸ್ವಾಮಿಯ ಉಚ್ಛಾಯದ (ಸಣ್ಣ ರಥ) ರಥೋತ್ಸವವು ಶುಕ್ರವಾರ ಬೆಳಿಗ್ಗೆ ಸಂಭ್ರಮದಿಂದ ಜರುಗಿತು.

ಗ್ರಾಮದ ಮಹಿಳೆಯರ ಪೂರ್ಣಕುಂಭ ಕಳಸ ಮತ್ತು ಹಲಗೆ, ಜಾಂಜ್ ಮೇಳ, ಡೊಳ್ಳು, ಶಂಖ-ಜಾಗಟೆ ಸೇರಿದಂತೆ ಮುಂತಾದ ಕಲಾ ತಂಡಗಳು ರಥೋತ್ಸವಕ್ಕೆ ಮೆರಗು ತಂದವು. ರಥವು ಬನ್ನಿ ಮರದ ವರೆಗೆ ಆಗಮಿಸಿ, ಪುನಃ ಆಂಜನೇಯ ದೇವಸ್ಥಾನ ತಲುಪಿತು. ನಂತರ ದೇವರು ಬೇಟೆಯಾಡುವ, ಭೂತನ ಸೇವೆ ಕಾರ್ಯಕ್ರಮ ನಡೆದವು. ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಸಂಜೆ ಓಕಳಿ ನಡೆಯಿತು. ಅತೀ ಪುಟ್ಟ ಗ್ರಾಮವಾಗಿರುವ ಕೊಪ್ಪದಲ್ಲಿ ಎಂಟು ದೇವಸ್ಥಾನಗಳಿರುವುದು ವಿಶೇಷವಾಗಿದೆ.



## ಮಲೇಬೆನ್ನೂರಿನಲ್ಲಿ ಶ್ರೀ ಶಂಕರ ಜಯಂತಿ

ಮಲೇಬೆನ್ನೂರು, ಮೇ 12 - ಪಟ್ಟಣದ ಶಂಕರ ಮಂದಿರದಲ್ಲಿ ಭಾನುವಾರ ಆದಿಗುರು ಶ್ರೀ ಶಂಕರಾಚಾರ್ಯರ ಜಯಂತಿಯನ್ನು ವಿವಿಧ ಪೂಜೆ, ಪಠಣಗಳೊಂದಿಗೆ ಆಚರಿಸಲಾಯಿತು.

# ಬಸವಣ್ಣ ಅನೇಕರಿಗೆ ಸ್ಫೂರ್ತಿದಾಯಕ



ಹರಿಹರ, ಮೇ 12 - ಮಾನವ ಕಲ್ಯಾಣ ಬಯಸುವ ಅನೇಕರಿಗೆ ಸಾಂಸ್ಕೃತಿಕ ನಾಯಕ ಬಸವಣ್ಣ ಸ್ಫೂರ್ತಿ ದಾಯಕ ಎಂದು ಬಸವೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ ಹೇಳಿದರು. ನಗರದ ಬಸವೇಶ್ವರ ಸೇವಾ ಸಮಿತಿಯಿಂದ ಶುಕ್ರವಾರ ಆಯೋಜಿಸಿದ್ದ 'ಬಸವ ಜಯಂತಿ'ಯ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾಂಸ್ಕೃತಿಕ ನಾಯಕ ಬಸವಣ್ಣ ತಮ್ಮ ಸರಳ ವಚನಗಳ ಮೂಲಕ ಸಮಾಜದ ಅಂಕು ಡೊಂಕು ತಿದ್ದುವ ಪ್ರಯತ್ನ ಮಾಡುವ ಜತೆಗೆ, ಬಿಜ್ಜಳನ ಆಸ್ಥಾನದಲ್ಲಿ ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಪ್ರಜಾಪ್ರಭುತ್ವ ಸ್ಥಾಪಿಸಿದ್ದರು ಎಂದು ಹೇಳಿದರು.

ಬಸವಣ್ಣನವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಂಡು ಉತ್ತಮ ಜೀವನ ಸಾಗಿಸಬೇಕೆಂದು ಯುವಕರಿಗೆ ಕಿವಿಮಾತು ನೀಡಿದರು.

ನಗರದ ಮುರುಘರಾಜೇಂದ್ರ ಕಲ್ಯಾಣ ಮಂಟಪದಿಂದ ಪ್ರಾರಂಭವಾದ ಪಲ್ಲಕ್ಕಿ ಉತ್ಸವದ ಮೆರವಣಿಗೆ ಕಲಾತಂಡದೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು.

ಈ ವೇಳೆ ಡಿ.ಜಿ. ಶಿವಾನಂದಪ್ಪ, ವಕೀಲ ಬಸವರಾಜ್ ಓಂಕಾರಿ, ವೀರೇಶ್ ಯಾದವಾಡ, ಎಂ. ಚಿದಾನಂದ ಕಂಚಿಕೇರಿ, ರುದ್ರೇಶ್ ತಿಪ್ಪಣ್ಣನವರ್, ರವಿಕುಮಾರ್, ಅರುಣ್ ಕುಮಾರ್, ಟಿ.ಜೆ. ಮುರುಗೇಶ್, ಚಂದ್ರಪ್ಪ, ಕತ್ತಲಗೇರೆ ಶಿವಯೋಗಿ ಸ್ವಾಮಿ ಮತ್ತು ಇತರರಿದ್ದರು.

## ಬಸವೇಶ್ವರರ ಜಯಂತ್ಯೋತ್ಸವ : ಶಾಮನೂರಿನಲ್ಲಿ ಮೆರವಣಿಗೆ



ದಾವಣಗೆರೆ, ಮೇ 12- ಬಸವ ಜಯಂತಿ ಪ್ರಯುಕ್ತ ಶಾಮನೂರಿನಲ್ಲಿ ಬಸವೇಶ್ವರರ ಭಾವಚಿತ್ರದ ಮೆರವಣಿಗೆಯನ್ನು ಗ್ರಾಮದ ರಾಜಬೀದಿಗಳಲ್ಲಿ ನಡೆಸಲಾಯಿತು. ಶ್ರೀ ಬಸವೇಶ್ವರ ದೇವಸ್ಥಾನ ಸಮಿತಿ ವತಿಯಿಂದ ಕಾರ್ಯಕ್ರಮ ಏರ್ಪಾಡಾಗಿತ್ತು.

## ಐಎಎಸ್ ಪರೀಕ್ಷೆ ಬರೆಯಲು ಆಸಕ್ತಿ ತೋರಿದರೆ ಉಚಿತ ತರಬೇತಿ : ವಿನಯ್



ದಾವಣಗೆರೆ, ಮೇ 12 - ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ದಾವಣಗೆರೆ ಜಿಲ್ಲೆಗೆ ಟಾಪರ್ ಆಗಿರುವ ಶ್ರೀ ಸಿದ್ಧಗಂಗಾ ಪ್ರೌಢಶಾಲಾ ವಿದ್ಯಾರ್ಥಿನಿ ಹೆಚ್.ಜಿ. ಗಾನವಿ ಅವರನ್ನು ಅವರ ನಿವಾಸಕ್ಕೆ ಭೇಟಿ ನೀಡಿ ಬೆಂಗಳೂರು ಇನ್ ಸೈಟ್ಸ್ ಸಂಸ್ಥಾಪಕ ಹಾಗೂ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಗೌರವಿಸಿದರು.

ಮುಂದಿನ ದಿನಗಳಲ್ಲಿ ಐಎಎಸ್ ಪರೀಕ್ಷೆ ಬರೆಯಲು ಆಸಕ್ತಿ ತೋರಿದರೆ ಉಚಿತ ತರಬೇತಿ ನೀಡುವುದಾಗಿ ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ವಿನಯ್ ಕುಮಾರ್, ದಾವಣಗೆರೆ ಜಿಲ್ಲೆಗೆ ಟಾಪರ್ ಆಗಿ ಬಂದಿರುವ ಗಾನವಿ ಆರನೇ ರ್‍ಯಾಂಕ್ ಪಡೆಯುವ ಗಮನ ಸೆಳೆದಿದ್ದಾಳೆ. ಇನ್ನೂ ಸ್ವಲ್ಪ ಕಠಿಣ ಅಭ್ಯಾಸ ಮಾಡಿದ್ದರೆ ಇನ್ನೂ ಒಳ್ಳೆಯ ರ್‍ಯಾಂಕ್ ಪಡೆಯಬಹುದಿತ್ತು. ಆದರೂ ಕಠಿಣ ಪರಿಶ್ರಮದಿಂದ ಓದಿ ಶಾಲೆಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿರುವ ಗಾನವಿ ಅಭಿನಂದಾರ್ಹರು ಎಂದು ಹೇಳಿದರು.

ಈ ವೇಳೆ ಗಾನವಿ ತಂದೆ ಹೆಚ್.ಎನ್. ಗಿರೀಶ್ ಮತ್ತು ತಾಯಿ ಜ್ಯೋತಿ ಮತ್ತಿತರರು ಹಾಜರಿದ್ದರು.

**ಕೋಳೇನಹಳ್ಳಿಗೆ ಭೇಟಿ:** ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರು ದಾವಣಗೆರೆ ತಾಲ್ಲೂಕಿನ ಹಳೇ ಕೋಳೇನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ಮೂಲಭೂತ ಸಮಸ್ಯೆಗಳ ಬಗ್ಗೆ ಸಮಾಲೋಚನೆ ನಡೆಸಿದರು.

ಈ ಸಂದರ್ಭದಲ್ಲಿ ಹೆಚ್. ಬಸವರಾಜಪ್ಪ, ಶಿವಲಿಂಗಪ್ಪ, ಸಿದ್ದಪ್ಪ, ಬೀರೇಶ್, ಬಸವರಾಜ, ಅರುಣ ಕುಮಾರ್, ಕೆ.ಆರ್. ಬಸವರಾಜ, ಹೆಚ್.ಸಿ. ಬೀರೇಶ್, ತಿಪ್ಪೇಶ್, ಸಿದ್ದೇಶ್ ಮತ್ತಿತರರು ಇದ್ದರು.

## ಶ್ರೀ ಬಸವೇಶ್ವರ, ಶ್ರೀ ವೀರೇಶ್ವರ ದೇವಸ್ಥಾನದಲ್ಲಿ ಬಸವ ಜಯಂತ್ಯೋತ್ಸವ



ದಾವಣಗೆರೆ, ಮೇ 12 - ನಗರದ ಬಸವರಾಜ ಪೇಟೆಯಲ್ಲಿರುವ ಶ್ರೀ ಬಸವೇಶ್ವರ ಹಾಗೂ ಶ್ರೀ ವೀರೇಶ್ವರ ದೇವಸ್ಥಾನದಲ್ಲಿ ಬಸವ ಜಯಂತಿಯನ್ನು ಹಾಗೂ ಶ್ರೀ ವೀರೇಶ್ವರ ಶರಣರ ಶತಮಾನೋತ್ಸವ ಕಾರ್ಯಕ್ರಮವನ್ನು ಅದ್ಧೂರಿಯಾಗಿ ನೆರವೇರಿಸಿದರು.

ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಸಾರ್ವಜನಿಕರಿಗೆ ಉಚಿತ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ವಿಶ್ವಗುರು ಶ್ರೀ ಬಸವೇಶ್ವರ ಮತ್ತು ಮಹಾದಾಸೋಹಿ ಶ್ರೀ ವೀರೇಶ್ವರ ಶರಣರ ಮೂರ್ತಿಗಳಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಸಂಜೆ ಶ್ರೀ ಬಸವೇಶ್ವರ ಭಾವ ಚಿತ್ರದ ಮೆರವಣಿಗೆ ಬಸವರಾಜಪೇಟೆ, ಹುಬ್ಬಳ್ಳಿ ಚೌಡಪ್ಪನ ಗಲ್ಲಿಯಲ್ಲಿ ನಡೆಯಿತು.

ಮೆರವಣಿಗೆಯಲ್ಲಿ ದೇವಸ್ಥಾನ ಕಮಿಟಿಯ ಅಧ್ಯಕ್ಷ ಮಲ್ಲಪ್ಪ ಬಿರಾದಾರ್, ಉಪಾಧ್ಯಕ್ಷ ವೀರಪ್ಪ ಎಂ. ಬಾವಿ, ಪ್ರಭು ಕಲಬುರ್ಗಿ ಪ್ರಧಾನ ಕಾರ್ಯದರ್ಶಿ ಎಂ. ದೊಡ್ಡಪ್ಪ, ಪ್ರಕಾಶ್, ಅಕ್ಕಿ ಶರಣಪ್ಪ, ಮರವಂಜಿ ಮಹಾದೇವ್, ವೀರೇಶ್ ಮುರುಗಯ್ಯ, ಜಯಣ್ಣ, ಕುಂಟೋಜಿ ಚೆನ್ನಪ್ಪ, ಹನುಮಂತಪ್ಪ, ನಾಗೂರು ಸಂಗಪ್ಪ, ಶಂಕರಗೌಡ, ಮಹಾಂತೇಶ್ ಒಣರೊಟ್ಟಿ, ದಾನಪ್ಪ, ಸಿದ್ದಲಿಂಗೇಶ್ ಮತ್ತಿತರರು ಭಾಗವಹಿಸಿದ್ದರು.

### ಎಸ್.ಕೆ. ಸದಾಶಿವಪ್ಪ ನಿಧನ



ಕಂದನಕೋವಿ ಸಮೀಪದ ಸಿದ್ದನೂರಿನ ಮುಖಂಡ ಹಾಗೂ ಕಂದನಕೋವಿ ಗ್ರಾಮ ಪಂಚಾಯತಿ ಮಾಜಿ ಸದಸ್ಯ ಎಸ್.ಕೆ. ಸದಾಶಿವಪ್ಪ (60) ಅವರು ದಿನಾಂಕ 12.5.2024ರ ಭಾನುವಾರ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.05.2024ರ ಸೋಮವಾರ ಬೆಳಿಗ್ಗೆ 12ಕ್ಕೆ ಮೃತರ ಸ್ವಗ್ರಾಮ ಸಿದ್ದನೂರಿನಲ್ಲಿ ನೆರವೇರಿಸಲಾಗುವುದು.

## ಜಾರ್ಖಂಡ್ ಸಚಿವಗೆ ಇ.ಡಿ. ಸಮನ್ಸ್

ರಾಂಚಿ, ಮೇ 12 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್ ಗ್ರಾಮೀಣಾಭಿವೃದ್ಧಿ ಸಚಿವ ಹಾಗೂ ಕಾಂಗ್ರೆಸ್ ಮುಖಂಡ ಆಲಂಗೀರ್ ಆಲಂಗೆ ಜಾರಿ ನಿರ್ದೇಶನಾಲಯ ಸಮನ್ಸ್ ಕಳಿಸಿದೆ. ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಕಳೆದ ವಾರ ಆಲಂ ಅವರ ಆಪ್ತ ಕಾರ್ಯದರ್ಶಿ, ಅಧಿಕಾರಿಗಳಾದ ಸಂಜೀವ್ ಕುಮಾರ್ ಲಾಲ್ ಹಾಗೂ ಅವರ ಮನೆ ಕೆಲಸದ ಜಹಾಂಗೀರ್ ಆಲಂ ಎಂಬುವವರನ್ನು ಬಂಧಿಸಲಾಗಿತ್ತು. ಇವರಿಗೆ ಸಂಬಂಧಿಸಿದ ಫ್ಲಾಟ್ ಒಂದರಿಂದ 32 ಕೋಟಿ ರೂ. ವಶಪಡಿಸಿಕೊಂಡ ನಂತರ ಪ್ರಕರಣ ದಾಖಲಿಸಲಾಗಿತ್ತು.

# ಮುಸಿಯಾ ಉಪಟಳಕ್ಕೆ ಬೇಸತ್ತ ಲಿಂಗಾಪುರ

## ಮುಸಿಯಾ ಹಿಡಿಯಲು ಗ್ರಾಪಂ ಹಾಗೂ ಅರಣ್ಯಾಧಿಕಾರಿಗಳ ನಿರ್ಲಕ್ಷ್ಯ



ಹೊನ್ನಾಳಿ

ಹೊನ್ನಾಳಿ, ಮೇ 12- ತಾಲ್ಲೂಕಿನ ಲಿಂಗಾಪುರ ಗ್ರಾಮದಲ್ಲಿ ಮುಸಿಯಾ ಕಾಟ ಹೆಚ್ಚಾಗಿದ್ದು, ಗ್ರಾಮದ ಜನರು ಮನೆಯಿಂದ ಹೊರ ಬರಲು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದಲ್ಲಿ 30ಕ್ಕೂ ಅಧಿಕ ಮುಸಿಯಾಗಳಿದ್ದು, ಅವುಗಳಲ್ಲಿ 1 ಮುಸಿಯಾ ವಿಚಿತ್ರವಾಗಿ ವರ್ತಿಸುವ ಜತೆಗೆ, ಮನೆಗೆ ನುಗ್ಗಿ ದಾಳಿ ಮಾಡುತ್ತಿರುವುದು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ.

ಬೇಸಿಗೆಯ ಶಕೆಗೆ ಮನೆಯ ಕಿಟಕಿ ಹಾಗೂ ಬಾಗಿಲು ತೆರೆದರೆ ಮನೆಯೊಳಗೆ ನುಗ್ಗಲು ಕಾದು ಕುಳಿತಿರುತ್ತವೆ. ಈಗಾಗಲೇ ಮನೆಯ ಮುಂಭಾಗದಲ್ಲಿದ್ದ ಕುರ್ಚಿಗಳನ್ನು ಮುರಿದು ಹಾಕಿದ್ದರಿಂದ ಮನೆಯಲ್ಲಿನ ಹೆಣ್ಣುಮಕ್ಕಳು ಮುಸಿಯಾಗಳಿಗೆ ಹೆದರಿದ್ದಾರೆ ಎಂದು ಗ್ರಾಮಸ್ಥ ಜಿ.ಸಿ. ಸೋಮಶೇಖರ್ ಅವರು ಪತ್ರಿಕೆಗೆ ತಮ್ಮ ಅಳಲು ತೋಡಿಕೊಂಡರು.

ನಾನೂ ಕೂಡ ನನ್ನ ವೈಯಕ್ತಿಕ ಕೆಲಸದ ನಿಮಿತ್ತ ಹೊರಗೆ ಹೋಗದೇ ಮುಸಿಯಾಗಳನ್ನು ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಹಲವಾರು ಬಾರಿ ಸ್ಥಳೀಯ ಗ್ರಾ.ಪಂಚಾಯಿತಿ ಮತ್ತು ಚನ್ನಗಿರಿ ವಲಯದ ಅರಣ್ಯಾಧಿಕಾರಿಗಳಿಗೆ ಮುಸಿಯಾಗಳನ್ನು ಹಿಡಿಸುವಂತೆ ಮನವಿ ಮಾಡಿದರೆ, ಅವರು ಒಂದು ಮುಸಿಯಾ ಹಿಡಿಯಲು 600 ರೂ. ಬೇಕು. ನೀವೇ ಹಣ ಕೊಟ್ಟು ಅವುಗಳನ್ನು ಹಿಡಿಸಿ ಎಂದು ಬೇಜವಾಬ್ದಾರಿತನದಿಂದ ಉತ್ತರಿಸುತ್ತಾರೆ ಎಂದು ದೂರಿದರು.

ಸಂಬಂಧ ಪಟ್ಟ ಅಧಿಕಾರಿಗಳೇ ಹೀಗೆ ಹೇಳಿದರೆ ನಮ್ಮ ಸಮಸ್ಯೆ ಯಾರ ಬಳಿ ಹೇಳಿಕೊಳ್ಳಬೇಕು. ತಕ್ಷಣವೇ ಈ ಬಗ್ಗೆ ಸಂಬಂಧಿಸಿದ ಮೇಲಾಧಿಕಾರಿಗಳು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.


### ಎನ್.ಬಿ.ವೀರೇಶ್ ನಿಧನ



ದಾವಣಗೆರೆ ಸಿಟಿ ವಿನೋಬನಗರ, 1ನೇ ಮೇನ್ ನಿವಾಸಿ ವರ್ತಕರಾದ **ಎನ್.ಬಿ. ವೀರೇಶ್ (62)** ಇವರು ದಿನಾಂಕ 12.5.2024ರ ಭಾನುವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.5.2024ರ ಸೋಮವಾರ ಮಧ್ಯಾಹ್ನ 12ಕ್ಕೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ರಾಜಣ್ಣ ಮತ್ತು ಮಕ್ಕಳು, ಧರ್ಮಪತ್ನಿ, ಮಕ್ಕಳು, ಅಳಿಯ, ನೀಲಗುಂದ ವಂಶಸ್ಥರು, ದಾವಣಗೆರೆ, ಮೊ : 80952 55505**

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 12.5.2024ರ ಭಾನುವಾರ ನಿಧನರಾದ ನಾಗರಕಟ್ಟೆ ಸೇವಾ ಸಮಿತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಪದಾಧಿಕಾರಿಗಳೂ ಆದ

**ಎನ್.ಬಿ.ವೀರೇಶ್**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಸರ್ವಪದಾಧಿಕಾರಿಗಳು, ಸದಸ್ಯರು**
**ನಾಗರಕಟ್ಟೆ ಸೇವಾ ಸಮಿತಿ, ವಿನೋಬನಗರ, ದಾವಣಗೆರೆ**


# ಪಹಣಿ ಸರಿಪಡಿಸದೇ ಇದ್ದರೆ ಪ್ರತಿಭಟನೆಯ ಎಚ್ಚರಿಕೆ

ದಾವಣಗೆರೆ, ಮೇ 12 – ಕೊಗ್ಗನೂರಿನ ನಿಂಗಮ್ಮ ಕೋಂ ನಾಗಪ್ಪ ಎಂಬುವವರ ಜಮೀನಿಗೆ ಸಂಬಂಧಿಸಿದ ಪಹಣಿ ಸರಿಪಡಿಸುವುದು ತಹಶೀಲ್ದಾರ್ ಕಚೇರಿಯಲ್ಲಿ ವಿಳಂಬವಾಗುತ್ತಿದೆ. ಈ ವಿಷಯ ಸರಿಪಡಿಸದೇ ಇದ್ದರೆ ಮೇ 27ರಿಂದ ಪ್ರತಿಭಟನೆ ನಡೆಸುವುದಾಗಿ ಕರ್ನಾಟಕ ರಾಜ್ಯ ರೈತ ಸಂಘದ ದಾವಣಗೆರೆ ಜಿಲ್ಲಾ ಸಮಿತಿ (ಪುಟ್ಟಣ್ಣಯ್ಯ ಬಣ)ಯ ಜಿಲ್ಲಾ ಅಧ್ಯಕ್ಷ ಬುಳ್ಳಾಪುರದ ಹನುಮಂತಪ್ಪ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಹಣಿ ಸರಿಪಡಿಸುವಂತೆ ಒಂದು ವರ್ಷದಿಂದ ಪದೇ ಪದೇ ಉಪವಿಭಾಗಾಧಿಕಾರಿಗಳನ್ನು ಭೇಟಿ ಮಾಡಲಾಗಿದೆ. ತಹಶೀಲ್ದಾರ್ ಕಚೇರಿಗೂ ಮನವಿ ಸಲ್ಲಿಸಲಾಗಿದೆ. ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು.

ಪೋಡಿ ಹಾಗೂ ಸರ್ವೆಗಳ ಹಲವಾರು ದೂರುಗಳು ತ್ವರಿತವಾಗಿ ಇತ್ಯರ್ಥವಾಗುತ್ತಿಲ್ಲ. ರೈತರು ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಇದೆ. ಈ ಬಗ್ಗೆ ತ್ವರಿತ ಕ್ರಮ ತೆಗೆದುಕೊಳ್ಳದಿದ್ದರೆ ಹೋರಾಟ ನಡೆಸುವುದಾಗಿ ಹನುಮಂತಪ್ಪ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಎಸ್.ಟಿ. ಪರಮೇಶ್ವರಪ್ಪ, ಐಗೂರು ಶಿವಮೂರ್ತಪ್ಪ, ಕೊಗ್ಗನೂರು ಹನುಮಂತಪ್ಪ, ಕರಿಲಕ್ಕೇನಹಳ್ಳಿ ಹನುಮಂತಪ್ಪ, ಸಿದ್ಲಪ್ಪ ಮತ್ತಿತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ನಿರ್ವಹಣೆ ತರಬೇತಿ ಅವಶ್ಯ : ಶಾಸಕ ಕೋಳಿವಾಡ

## ಜಿಲ್ಲೆಯಲ್ಲಿ 6ನೇ ಸ್ಥಾನದಲ್ಲಿದ್ದ ರಾಣೇಬೆನ್ನೂರು ತಾಲ್ಲೂಕು 3ನೇ ಸ್ಥಾನಕ್ಕೆ



ರಾಣೇಬೆನ್ನೂರು, ಮೇ 12- ತಾಲ್ಲೂಕಿನಲ್ಲಿ ಈ ಬಾರಿ 4613 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು, ಅದರಲ್ಲಿ 3754 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಜಿಲ್ಲೆಯಲ್ಲಿ 6ನೇ ಸ್ಥಾನದಲ್ಲಿದ್ದ ರಾಣೇಬೆನ್ನೂರು ತಾಲ್ಲೂಕು 3 ಸ್ಥಾನಕ್ಕೆ ಬಂದಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ನಿರ್ವಹಣೆ ತರಬೇತಿ ಅವಶ್ಯಕವಾಗಿದೆ. ಈ ದಿಸೆಯಲ್ಲಿ, ವಿದ್ಯಾ ರ್ಥಿಗಳು ಪರೀಕ್ಷಾ ಭಯ ಕಳೆದುಕೊಂಡು, ಪರೀಕ್ಷೆಯನ್ನು ಹೇಗೆ ಎದುರಿಸಬೇಕು ಎನ್ನುವ ಕುರಿತು ಆನ್‌ಲೈನ್‌ನಲ್ಲಿ 3 ಸಾವಿರ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಲಾಗಿತ್ತು. ಜೊತೆಗೆ ಶಿಕ್ಷಕರಲ್ಲಿನ ಗುಣಮಟ್ಟದ ಬೋಧನೆ ಈ ಫಲಿತಾಂಶ ಬರಲು ಸಾಧ್ಯವಾಯಿತು ಎಂದು ಶಾಸಕ ಪ್ರಕಾಶ ಕೋಳಿವಾಡ ಪತ್ರಿಕೆಯವರ ಪ್ರಶ್ನೆಗೆ ಉತ್ತರಿಸಿದರು.

ಪ್ರತಿ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ಮೂಲಕ ವಿದ್ಯಾರ್ಥಿಗಳಿಗೆ ಇಂತಹ ಬೋಧನಾ ಕ್ರಮ ಕೈಗೊಳ್ಳಬೇಕಿದೆ. ಪ್ರತಿಯೊಬ್ಬ ಶಿಕ್ಷಕರು ಅರ್ಹತೆಯ ಆಧಾರಿತ ರಾಗಿದ್ದು, ಅವರು ತಮ್ಮ ಕರ್ತವ್ಯದ ಫಲವನ್ನು ಪ್ರತಿ ವಿದ್ಯಾರ್ಥಿಗೆ ಧಾರೆ ಎರೆದರೆ ಈ ರೀತಿ ಫಲಿತಾಂಶದಲ್ಲಿ ಸುಧಾರಣೆ ಆಗಲಿದೆ ಎಂದು ಅವರು ಅಭಿಪ್ರಾಯಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆಯ ಮೂಲಕ ಬದಲಾವಣೆ ತರಬೇಕಿದೆ. ವಿದೇಶಗಳಲ್ಲಿ ಸಂಶೋಧನೆ ಕಾರ್ಯಕ್ಕೆ ಶೇ. 4 ರಷ್ಟು ಹಣ ಇಟ್ಟರೆ ನಮ್ಮ ದೇಶದಲ್ಲಿ ಶೇ. 2 ಇಡಲಾಗುತ್ತಿದೆ. ಒಟ್ಟಾರೆ ವ್ಯವಸ್ಥೆಯ ಬದಲಾವಣೆ ಅವಶ್ಯವಿದೆ ಎಂದು ಹೇಳಿದ ಶಾಸಕರು, ತಮ್ಮ ಅನುದಾನದ ಶೇ. 90 ರಷ್ಟನ್ನು ಶಿಕ್ಷಣಕ್ಕೆ ವ್ಯಯಿಸುವುದಾಗಿ ವಿವರಿಸಿದರು.

**'ಇಂಡಿಯಾ'ಕ್ಕೆ ಬಹುಮತ:** ಈ ಲೋಕಸಭೆ ಚುನಾವಣೆಯಲ್ಲಿ ಹಾವೇರಿ ಸೇರಿದಂತೆ ರಾಜ್ಯದಲ್ಲಿ 20 ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಹಾಗೂ ಕೇಂದ್ರದಲ್ಲಿ 'ಇಂಡಿಯಾ' ಒಕ್ಕೂಟ ಬಹುಮತ ಗಳಿಸಲಿದೆ ಎಂದು ಶಾಸಕ ಪ್ರಕಾಶ ವಿಶ್ವಾಸ ವ್ಯಕ್ತಪಡಿಸಿದರು.

# ಇಂದು ನಾಲ್ಕನೇ ಸುತ್ತಿನ ಮತದಾನ ತಾಪಮಾನ ವಾಡಿಕೆಗಿಂತ ಕಡಿಮೆ

ನವದೆಹಲಿ, ಮೇ 12 - ಸೋಮವಾರ ಲೋಕಸಭಾ ಚುನಾವಣೆಗೆ ನಾಲ್ಕನೇ ಸುತ್ತಿನ ಮತದಾನ ನಡೆಯಲಿದ್ದು, ಈ ಬಾರಿ ತಾಪಮಾನ ಸಾಮಾನ್ಯ ಇಲ್ಲವೇ ಸಾಮಾನ್ಯಕ್ಕಿಂತ ಕಡಿಮೆ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

10 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 96 ಲೋಕಸಭಾ ಕ್ಷೇತ್ರಗಳಿಗೆ ಸೋಮವಾರ ಚುನಾವಣೆ ನಡೆಯಲಿದೆ.

ತೆಲಂಗಾಣದ ಕೆಲ ಕ್ಷೇತ್ರಗಳಲ್ಲಿ ತಾಪಮಾನ ಹೆಚ್ಚಾಗಿರುವ ಕಾರಣ, ಚುನಾವಣಾ ಆಯೋಗವು ಮತದಾನದ ಅವಧಿಯನ್ನು ಹೆಚ್ಚಿಸಿದೆ.

ಮೊದಲ ಮೂರು ಹಂತಗಳಲ್ಲಿ ಮತದಾನದ ಪ್ರಮಾಣ ಶೇ.66.14, ಶೇ.66.71 ಹಾಗೂ ಶೇ.65.68 ಆಗಿತ್ತು.

ತಾಪಮಾನ ಹೆಚ್ಚಾಗಿರುವ ಕಾರಣ ಮೊದಲ ಮೂರು ಹಂತಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆ ಮತದಾನವಾಗಿದೆ ಎಂದು ಚುನಾವಣಾ ಆಯೋಗ ಅಭಿಪ್ರಾಯ ಪಟ್ಟಿತ್ತು. ಮೊದಲ ಮೂರು ಹಂತಗಳಲ್ಲಿ ಲೋಕಸಭೆಯ ಒಟ್ಟು 543 ಕ್ಷೇತ್ರಗಳ ಪೈಕಿ 283ರಲ್ಲಿ ಮತದಾನವಾಗಿದೆ.

# ದೆಹಲಿ ಆಸ್ಪತ್ರೆ, ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ

ನವದೆಹಲಿ, ಮೇ 12 – ದೆಹಲಿಯ ಎಂಟು ಆಸ್ಪತ್ರೆಗಳು ಹಾಗೂ ಐ.ಜಿ.ಐ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆದರಿಕೆಯ ಇ-ಮೇಲ್ ಕಳಿಸಲಾಗಿದೆ. 11 ದಿನಗಳ ಹಿಂದಷ್ಟೇ 150ಕ್ಕೂ ಹೆಚ್ಚು ಶಾಲೆಗಳಿಗೆ ಬೆದರಿಕೆಯ ಇ-ಮೇಲ್ ಕಳಿಸಲಾಗಿತ್ತು. ಮಧ್ಯಾಹ್ನ 3 ಗಂಟೆಯ ನಂತರ ಬೆದರಿಕೆ ಹಾಕಿರುವ ಇ-ಮೇಲ್‌ಗಳು ಬಂದಿದ್ದವು. ನಂತರ ನಡೆಸಲಾದ ತಪಾಸಣೆಯಲ್ಲಿ ಯಾವುದೇ ಶಂಕಾಸ್ಪದ ವಸ್ತುಗಳು ಕಂಡು ಬಂದಿಲ್ಲ.

# ಪ್ರಜ್ವಲ್ ಪ್ರಕರಣ ಸಿಬಿಐ ತನಿಖೆ ಇಲ್ಲ : ಸಿದ್ದರಾಮಯ್ಯ



ಬೆಂಗಳೂರು, ಮೇ 12 - ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪೆನ್ ಡ್ರೈವ್ ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಇಂತಹ ಬೇಡಿಕೆ ಇಡುವ ಬಿಜೆಪಿಯನ್ನು ಪ್ರಶ್ನಿಸಿದ ಅವರು, ಪೊಲೀಸರನ್ನು ಏಕೆ ನಂಬುವುದಿಲ್ಲ? ನ್ಯಾಯಯುತ ತನಿಖೆ ನಡೆಸುತ್ತಿರುವ ಎಸ್‌ಐಟಿ ಬಗ್ಗೆ ಜನರ ಮನಸ್ಸಿನಲ್ಲಿ ಗೊಂದಲ ಮೂಡಿಸುವ ಉದ್ದೇಶದಿಂದ ದಾರಿ ತಪ್ಪಿಸುವ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಎಸ್.ಐ.ಟಿ. ದಕ್ಷವಾಗಿದೆ, ಅದರ ಮೇಲೆ ನಂಬಿಕೆ ಇದೆ ಎಂದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿಯು ಒಂದು ಕಾಲದಲ್ಲಿ ಸಿಬಿಐ ಅನ್ನು 'ಭ್ರಷ್ಟಾಚಾರದ ತನಿಖಾ ದಳ' ಎಂದು ಕರೆದಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾಗ ಒಂದೇ ಒಂದು ಪ್ರಕರಣವನ್ನೂ ಕೇಂದ್ರದ ತನಿಖಾ ಸಂಸ್ಥೆಗೆ ಹಸ್ತಾಂತರಿಸಲಿಲ್ಲ ಎಂದರು.

ಸಿಬಿಐ ಮೇಲೆ ನಮಗೆ ನಂಬಿಕೆ ಇಲ್ಲ ಎಂದಲ್ಲ, ಸಿಬಿಐಗೆ ವಹಿಸಬೇಕಾದ ಪ್ರಕರಣಗಳನ್ನು ನೀಡಲಾಗುವುದು. ನಾನು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಏಳು ಪ್ರಕರಣಗಳನ್ನು ಸಿಬಿಐಗೆ ನೀಡಿದ್ದೆ. ಆದರೆ, ಒಂದೇ ಒಂದು ಪ್ರಕರಣದಲ್ಲಿ ಶಿಕ್ಷೆಯಾಗಿಲ್ಲ. ಎಸ್‌ಐಟಿ ಕೂಡ ಸಿಬಿಐನಂತಹ ತನಿಖಾ ಸಂಸ್ಥೆಯಾಗಿದ್ದು, ನಾವು ನಮ್ಮ ಪೊಲೀಸರಿಂದ ತನಿಖೆ ನಡೆಸುತ್ತೇವೆ ಎಂದು ಹೇಳಿದರು.

ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣಗಳ ತನಿಖೆಗೆ ಕಾಂಗ್ರೆಸ್ ಸರ್ಕಾರ ವಿಶೇಷ ತನಿಖಾ ತಂಡ (ಎಸ್.ಐ.ಟಿ.) ರಚಿಸಿದ್ದರೆ, ಬಿಜೆಪಿ ಮತ್ತು ಜೆಡಿಎಸ್ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಮತ್ತು ವಿಡಿಯೋ ಹಂಚಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿವೆ.

ದೇವರಾಜೇಗೌಡರನ್ನು ಬಂಧಿಸಿರುವುದು ಆಡಳಿತಾರೂಢ ಕಾಂಗ್ರೆಸ್ ಮತ್ತು ಪಕ್ಷದ ನಾಯಕರನ್ನು ರಕ್ಷಿಸಲು ಎಂದಿರುವ ಬಿಜೆಪಿ ಆರೋಪ ತಳ್ಳಿ ಹಾಕಿದ ಸಿದ್ದರಾಮಯ್ಯ, ಸುಳ್ಳು ಆರೋಪ ಮಾಡುವುದೇ ಬಿಜೆಪಿಯ ಕೆಲಸ ಎಂದಿದ್ದಾರೆ.

ಮಹಿಳೆ ಮೇಲಿನ ಲೈಂಗಿಕ ದೌರ್ಜನ್ಯದ ಆರೋಪದ ಹಿನ್ನೆಲೆಯಲ್ಲಿ ದೇವರಾಜೇಗೌಡ ಅವರನ್ನು ಬಂಧಿಸಲಾಗಿದೆ. ಏಪ್ರಿಲ್ 1 ರಂದು ದೂರು ದಾಖಲಾಗಿದೆ. ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ, ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸುವುದು ಅವರ ಕರ್ತವ್ಯವಾಗಿದೆ ಎಂದು ಹೇಳಿದರು.

## ಪ್ರಜ್ವಲ್ ಪ್ರಕರಣ : ವಿದೇಶಕ್ಕೆ ಎಸ್.ಐ.ಟಿ ರವಾನೆ ಇಲ್ಲ

ಬೆಂಗಳೂರು, ಮೇ 12 - ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್.ಐ.ಟಿ.) ಪ್ರಜ್ವಲ್ ಅವರನ್ನು ವಾಪಸ್ ಕರೆತರಲು ವಿದೇಶಕ್ಕೆ ಹೋಗುವುದಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಂಟರ್‌ಪೋಲ್ ಪ್ರಜ್ವಲ್ ಕುರಿತಾದ ಮಾಹಿತಿ ಹಂಚಿಕೊಳ್ಳಲಿದೆ ಎಂದು ಹೇಳಿದರು.

ಇದೊಂದು ಸೂಕ್ಷ್ಮವಾಗಿರುವ ಪ್ರಕರಣವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಾರ್ವಜನಿಕ ಹೇಳಿಕೆಗಳನ್ನು ನೀಡುವುದು ಅಥವಾ ಮಾಹಿತಿಯನ್ನು ಹಂಚಿಕೊಳ್ಳುವ ಬಗ್ಗೆ ಅವರು ರಾಜಕೀಯ ಮುಖಂಡರಿಗೆ ಎಚ್ಚರಿಕೆ ನೀಡಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತಂಡ ವಿದೇಶ ಪ್ರವಾಸ ಕೈಗೊಂಡಿದೆ ಎಂಬ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಇಲ್ಲ, ಅಂತಹ ಯಾವುದೇ ಆಯ್ಕೆ ಇಲ್ಲ. ಬ್ಲೂ ಕಾರ್ನರ್ ನೋಟಿಸ್ ನೀಡಲಾಗಿದೆ ಮತ್ತು ಇಂಟರ್‌ಪೋಲ್ ಪ್ರಜ್ವಲ್ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳುತ್ತದೆ. ಪ್ರಜ್ವಲ್ ಪತ್ತೆಯಾದ ಅಥವಾ ಗುರುತಿಸಲಾದ ಆಯಾ ದೇಶ ಇಂಟರ್‌ಪೋಲ್‌ಗೆ ಮಾಹಿತಿ ನೀಡುತ್ತಾರೆ ಮತ್ತು ನಂತರ ಸಿಬಿಐ ತಿಳಿದುಕೊಳ್ಳುತ್ತದೆ ಮತ್ತು ಅವರ ಮೂಲಕ ನಮಗೆ ತಿಳಿಯುತ್ತದೆ ಎಂದು ಹೇಳಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡರ ವಿರುದ್ಧ ಆರೋಪ ಮಾಡಿರುವ ಬಿಜೆಪಿ ಮುಖಂಡ ದೇವರಾಜೇಗೌಡ ಬಂಧನದ ಹಿಂದೆ ಷಡ್ಯಂತ್ರವಿದೆ ಎಂಬ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿರುವುದನ್ನು ಪರಮೇಶ್ವರ್ ತಳ್ಳಿ ಹಾಕಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡುವಾಗ ಎಚ್ಚರಿಕೆಯಿಂದಿರುವಂತೆ ಸಾರ್ವಜನಿಕರು ಮತ್ತು ನಾಯಕರಿಗೆ ನಾನು ಮನವಿ ಮಾಡುತ್ತೇನೆ. ಇಲ್ಲದಿದ್ದರೆ, ಅವರು ನೀಡಿದ ಹೇಳಿಕೆಗಳ ಆಧಾರದ ಮೇಲೆ, ನಾವು ಅವರನ್ನು ತನಿಖೆಗೆ ಕರೆದು ಸಿಆರ್‌ಪಿಸಿಯ 41 ಎ ಅಡಿಯಲ್ಲಿ ಅವರ ಹೇಳಿಕೆಯನ್ನು ದಾಖಲಿಸಬೇಕಾಗಬಹುದು ಎಂದರು.

## ಪ್ರಜ್ವಲ್ ಪ್ರಕರಣದ ತನಿಖೆ ದಿಕ್ಕು ತಪ್ಪುತ್ತಿದೆ : ಬೊಮ್ಮಾಯಿ

ಬೆಂಗಳೂರು, ಮೇ 12 – ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದ ಎಸ್‌ಐಟಿಯ ತನಿಖೆ ದಿಕ್ಕು ತಪ್ಪುತ್ತಿದೆ. ಸರಿಯಾದ ತನಿಖೆಗಾಗಿ ಪ್ರಕರಣವನ್ನು ಸಿಬಿಐಗೆ ವಹಿಸಲಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್‌ಐಟಿಯವರು ಅಪರಾಧಿಗಳನ್ನು ಬಂಧಿಸುತ್ತಿಲ್ಲ. ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಅಂದರೆ, ಸಿಬಿಐಗೆ ವಹಿಸಲಿ ಎಂದು ಆಗ್ರಹಿಸಿದರು.

ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಯಾರೂ ಸಮರ್ಥನೆ ಮಾಡುವ ಪ್ರಶ್ನೆಯೇ ಇಲ್ಲ. ಆದರೆ, ಪ್ರಕರಣದ ತನಿಖೆ ನಡೆಯುತ್ತಿರುವ ರೀತಿ ಸರಿ ಇಲ್ಲ. ಮಾಹಿತಿ ಕೊಟ್ಟವರನ್ನೇ ಬಂಧನ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಪರಿಷತ್ ಚುನಾವಣೆಗೆ ಟಿಕೆಟ್ ಘೋಷಣೆಯಾದ ಮೇಲೆ ಕೆಲವರಲ್ಲಿ ಅಸಮಾಧಾನವಾಗಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ವಿಧಾನ ಪರಿಷತ್ ಚುನಾವಣೆಗೆ ಹಲವರು ಆಕಾಂಕ್ಷಿಗಳು ಇದ್ದರು. ಟಿಕೆಟ್ ಕೈತಪ್ಪಿದಾಗ ಸಹಜವಾಗಿ ಬೇಸರ ಆಗುತ್ತದೆ. ಎಲ್ಲವೂ ಸರಿ ಹೋಗುತ್ತದೆ. ಈಗಾಗಲೇ ಮೈತ್ರಿ ಬಗ್ಗೆ ವರಿಷ್ಠರು ಯಾವ ರೀತಿ ತೀರ್ಮಾನ ಮಾಡಿದ್ದಾರೋ ಅದರಂತೆ ನಡೆಯುತ್ತದೆ ಎಂದರು.

# ವಿದ್ಯಾರ್ಥಿಗಳಿಗೆ ಬಸವಣ್ಣನ ನಡೆ-ನುಡಿ ಸಿದ್ಧಾಂತದ ಅಗತ್ಯವಿದೆ

## ಯುಬಿಡಿಟಿ ಕಾಲೇಜಿನ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶಿವನಕೆರೆ ಬಸವಲಿಂಗಪ್ಪ



ದಾವಣಗೆರೆ,ಮೇ 12- ಬಸವಣ್ಣನವರು 12ನೇ ಶತಮಾನದಲ್ಲಿ ಮಾಡಿದ ಪರಿವರ್ತನೆ ಸಮಗ್ರ ಕ್ರಾಂತಿಯ ಪ್ರತೀಕ. ಹಾಗಾಗಿಯೇ ಅವರನ್ನು ಕರ್ನಾಟಕ ಸರ್ಕಾರ 'ವಿಶ್ವ ಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿದೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಶಿವನಕೆರೆ ಬಸವಲಿಂಗಪ್ಪ ಹೇಳಿದರು.

ವಿಶ್ವ ವಿದ್ಯಾನಿಲಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು ಮಾತನಾಡಿದರು.

ಪ್ರಜಾಪ್ರಭುತ್ವದ ಸಂಸ್ಥಾಪಕ. ಸಮಸಮಾಜದ ಸಂವಿಧಾನ ಶಿಲ್ಪಿ ಇತ್ಯಾದಿ ಬಹುಮುಖ ವ್ಯಕ್ತಿತ್ವದ ಬಸವಣ್ಣನವರ ಪರಿಚಯ ಇಂದು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ತುರ್ತಾಗಿ ಆಗಬೇಕಿದೆ. ಹಾಗಾಗಿ ಪಠ್ಯದಲ್ಲಿ ಬಸವ ಚರಿತ್ರೆ, ಶರಣರ ವಚನಗಳು ಅಳವಡುವಂತೆ ಆಗಬೇಕು. ಸಂವಾದ ಗೋಷ್ಠಿಗಳು ನಡೆಯಬೇಕು. ನಡೆ-ನುಡಿ ಸಿದ್ಧಾಂತದ ಅಗತ್ಯವನ್ನು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಮನದಟ್ಟು ಮಾಡಬೇಕು ಎಂದು ತಿಳಿಸಿದರು.

ಬಸವಣ್ಣನವರು ಕಲ್ಯಾಣದಲ್ಲಿ 'ಮಾನವೀಯ ಸಮಾಜ ನಿರ್ಮಾಣ' ಮಾಡುವಲ್ಲಿ ಸಮ-ಸಮಾಜದ ಕಲ್ಪನೆ, ಸರ್ವರಿಗೂ ಸಮಪಾಲು, ಸಮಬಾಳೆಂಬ ಆರ್ಥಿಕ ಚಿಂತನೆ, ಕಾಯಕ ಮತ್ತು ದಾಸೋಹದ ಪರಿಕಲ್ಪನೆ, ವರ್ಣ, ವರ್ಗ, ಲಿಂಗ, ಜಾತಿಗಳ ನಿರಾಕರಣೆ, ಸ್ಥಾವರ ನಿರಾಕರಣೆ, ಜಂಗಮ ಪುರಸ್ಕರಣೆ, ವೇದ, ಪುರಾಣ, ಶಾಸ್ತ್ರ, ಆಗಮಗಳ ಬಗ್ಗೆ, ವೈಚಾರಿಕವಾದ ಮಾನವೀಯ ಸ್ಪಷ್ಟ ನಿಲುವು, ಮೌಢ್ಯಗಳ ನಿರಾಕರಣೆ, ನೈತಿಕ ನೆಲೆಗಟ್ಟು ಮುಂತಾದ ಶರಣ ಸಿದ್ಧಾಂತಗಳಿಗೆಲ್ಲ ನಡೆ-ನುಡಿ ಸಿದ್ಧಾಂತದ ಮೂಲಕ ಭದ್ರ ಬುನಾದಿ ಹಾಕಿದರು.

ಇಂತಹ ಎಲ್ಲಾ ಶರಣರ ತತ್ವಗಳನ್ನು ಬಸವಣ್ಣ ಹಾಗೂ 1,96,000 ಶರಣರು ಮತ್ತು 770 ಅಮರಗಣಂಗಳು ಒಟ್ಟಾಗಿಯೇ ಕಾರ್ಯನಿರ್ವಹಿಸಿದ್ದರಿಂದ ಮಾನವೀಯ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಯಿತು. ಈಗಲೂ ಸಹ ಇದೇ ರೀತಿಯ ಕಾರ್ಯಾಚರಣೆಗಳು ನಡೆಯಬೇಕೆಂದು ಆಶಿಸಿದರು.

ಪ್ರಾಂಶುಪಾಲ ಡಾ.ಡಿ.ಪಿ.ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕ ಡಾ.ಎನ್. ನಾಗೇಶ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಎಂ.ಹೆಚ್.ದಿವಾಕರ್ ವಂದಿಸಿದರು. ಕುಮಾರಿ ಶ್ವೇತಾ ಕೆ.ವಿ ನಿರೂಪಿಸಿದರು.

## ಕೆ.ಎನ್.ಹಳ್ಳಿ : ಗಮನ ಸೆಳೆಯುವ ಬಸ್ ತಂಗುದಾಣ



ಮಲೇಬೆನ್ನೂರು, ಮೇ 12- ಅನೈತಿಕ ತಾಣವಾಗಿದ್ದ ಪ್ರಯಾಣಿಕರ ತಂಗುದಾಣವನ್ನು ಸೈನಿಕರೊಬ್ಬರು ಆಸಕ್ತಿ ವಹಿಸಿ, ಮದುವಣಗಿತ್ತಿಯಂತೆ ಸಿಂಗಾರಗೊಳಿಸಿ, ಎಲ್ಲರ ಗಮನ ಸೆಳೆಯುವಂತೆ ಕಡರನಾಯ್ಕನಹಳ್ಳಿ ಗ್ರಾಮದಲ್ಲಿ ಮಾಡಿದ್ದಾರೆ.

ದೇಶ ರಕ್ಷಣೆ ನನ್ನ ಕರ್ತವ್ಯ, ಸಮಾಜ ಸೇವೆಯೇ ನನ್ನ ಮೂಲ ಮಂತ್ರ ಎನ್ನುವ ಗ್ರಾಮದ ಡಾ. ವೈ.ನಾಗಪ್ಪ ಬಡಾವಣೆಯ ವಾಸಿ ಹಾಗೂ ಸೈನಿಕ ಶಾಂತಕುಮಾರ್ ಎಂಬುವವರು ಉತ್ತರ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ರಜೆಯ ಮೇಲೆ ಗ್ರಾಮಕ್ಕೆ ಬಂದಿದ್ದ ವೇಳೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬಸ್ ತಂಗುದಾಣವನ್ನು ನೋಡುತ್ತಾರೆ. ಕೂಡಲು ಯೋಗ್ಯವಲ್ಲದ ಈ ತಂಗುದಾಣವನ್ನು ಆಕರ್ಷಕವಾಗಿ ಮಾಡುವ ಇಚ್ಛೆಯನ್ನು ಕೆಲ ಯುವಕರಲ್ಲಿ ಹಂಚಿಕೊಳ್ಳುತ್ತಾರೆ.

ನಂತರ ಬಡಾವಣೆಯಲ್ಲೇ ವಾಸವಿರುವ ಚಿತ್ರ ಕಲಾವಿದ ಪಿ.ಟಿ. ಬಸವರಾಜ್ ಅವರ ಮನವೊಲಿಸಿ ಇದಕ್ಕೊಂದು ಆಕಾರ ಕೊಡುತ್ತಾರೆ.

ಒಂದು ಗೋಡೆಗೆ ದೇಶದ ಬೆನ್ನೆಲುಬಾದ ನೇಗಿಲು ಹೊತ್ತ ರೈತ ಮತ್ತು ಹೊಲ, ಗದ್ದೆಗಳ ಚಿತ್ರ, ಇನ್ನೊಂದು ಗೋಡೆಗೆ ರಾಷ್ಟ್ರ ಧ್ವಜ ಮತ್ತು ಬಂದೂಕು ಹಿಡಿದ ಸೈನಿಕರ ಚಿತ್ರ, ಇನ್ನೊಂದು ಗೋಡೆಗೆ ಕ್ರೀಡೆಗೆ ಸಂಬಂಧಿಸಿದ ಚಿತ್ರ. ಈ ರೀತಿ ತಂಗುದಾಣದ ಗೋಡೆಗಳನ್ನು ಚಿತ್ರಿಸಿದ್ದಾರೆ. ತಂಗುದಾಣದ ಒಳಗಡೆ ಹೋಗುವ ಮೊದಲು ಎಡಗಡೆ ಇಲ್ಲಿ ಯಾರೂ ಪೋಸ್ಟರ್ ಹಚ್ಚುವಂತಿಲ್ಲ ಮತ್ತು ಗಲೀಜು ಮಾಡಬಾರದು ಎಂದು ಬರೆಯಲಾಗಿದೆ. ಬಲಗಡೆ ಮದ್ಯ ನಿಷೇಧದ ಚಿತ್ರ ಬಿಡಿಸಲಾಗಿದೆ. ಕಂಬಗಳಿಗೆ ಅತ್ಯಾಕರ್ಷಕ ಪೇಂಟಿಂಗ್ ಮಾಡಲಾಗಿದ್ದು, ಬಸ್ ತಂಗುದಾಣ ಈಗ ಎಲ್ಲರ ಗಮನ ಸೆಳೆಯುವುದರ ಜೊತೆಗೆ ಮಾದರಿಯಾಗಿದೆ.

# ರಿಲ್ಯಾಕ್ಸ್ ಬಿಟ್ಟು ರೈತರಿಗೆ ನೆರವಾಗಲು ಸರ್ಕಾರಕ್ಕೆ ರೈತ ಒಕ್ಕೂಟದ ಆಗ್ರಹ

ದಾವಣಗೆರೆ, ಮೇ 12 - ಬರಗಾಲ ತೀವ್ರವಾಗಿ ತೋಟಗಳು ಒಣಗುತ್ತಿವೆ ಹಾಗೂ ಜಾನುವಾರುಗಳು ಸಂಕಷ್ಟಕ್ಕೆ ಗುರಿಯಾಗಿವೆ. ಆದರೆ, ಆಡಳಿತ ಯಂತ್ರ ರೈತರ ಸಂಕಷ್ಟ ನಿವಾರಣೆಗೆ ಕೆಲಸ ಮಾಡುವುದನ್ನು ಬಿಟ್ಟು ಚುನಾವಣೆ ನಂತರ 'ರಿಲ್ಯಾಕ್ಸ್' ಮಾಡುತ್ತಿದೆ ಎಂದು ರೈತ ಒಕ್ಕೂಟದ ಮುಖಂಡರಾದ ಕೊಳೇನಹಳ್ಳಿ ಸತೀಶ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ರೆಸಾರ್ಟ್‌ನಲ್ಲಿ ವಿಶ್ರಾಂತಿಗೆ ತೆರಳಿದ್ದಾರೆ. ಅಧಿಕಾರಿಗಳು ರೈತರ ಬದುಕಿನ ಕಡೆ ಗಮನ ಹರಿಸುತ್ತಿಲ್ಲ ಎಂದು ಆಕ್ಷೇಪಿಸಿದರು.

ಭದ್ರಾ ನೀರು ಸಮರ್ಪಕವಾಗಿ ಹರಿಯದ ಕಾರಣ ಕಬ್ಬು, ಅಡಿಕೆ, ತೆಂಗು ಹಾಗೂ ಬಾಳೆ ಗಿಡಗಳು ಒಣಗಿವೆ. ಅಂತರ್ಜಲ ಮಟ್ಟ ಕುಸಿದಿದೆ. ಜಾನುವಾರುಗಳು ಬಳಲುತ್ತಿದ್ದು, ಕಡಿಮೆ ಬೆಲೆಗೆ ಮಾರಲು ರೈತರು ಮುಂದಾಗುತ್ತಿದ್ದಾರೆ ಎಂದವರು ಹೇಳಿದರು.

ಇನ್ನಾದರೂ ರಾಜ್ಯ ಆಡಳಿತ ರಿಲ್ಯಾಕ್ಸ್ ಸ್ಥಿತಿಯಿಂದ ಹೊರ ಬಂದು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸತೀಶ್ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಬೆಳವನೂರು ನಾಗೇಶ್ವರ ರಾವ್, ರೈತರಿಗೆ ಪರಿಹಾರ ನೀಡುವ ಜಿಲ್ಲಾ ಸಮಿತಿಯಲ್ಲಿ ಕನಿಷ್ಠ ಐವರು ರೈತರನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಇದರಿಂದ ರೈತರಿಗೆ ಸಮರ್ಪಕವಾಗಿ ಪರಿಹಾರ ಒದಗಿಸಲು ಸಾಧ್ಯವಾಗುತ್ತದೆ. ಶೇ.50ರ ವಿನಾಯಿತಿ ದರದಲ್ಲಿ ಮೇವು ಕಿಟ್ ವಿತರಿಸಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಗೋಣಿವಾಡ ಮಂಜುನಾಥ್ ಮಾತನಾಡಿ, ನೀರಿನ ಸಂಕಷ್ಟ ಮತ್ತೆ ಎದುರಾಗುವುದನ್ನು ತಪ್ಪಿಸಲು ಸಾಧ್ಯವಿರುವ ಕಡೆಗಳಲ್ಲಿ ಚೆಕ್‌ಡ್ಯಾಮ್ ನಿರ್ಮಾಣ ಹಾಗೂ ಕೆರೆಗಳಿಗೆ ನೀರು ತುಂಬಿಸುವ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ಬಲ್ಲೂರು ಬಸವರಾಜ್, ಕುಂದುವಾಡದ ಗಣೇಶಪ್ಪ, ಜಿಮ್ಮಿ ಹನುಮಂತಪ್ಪ, ಸತೀಶ್ ಶ್ಯಾಗಲೆ ಹಾಗೂ ಮತ್ತಿ ಮಂಜುನಾಥ್ ಉಪಸ್ಥಿತರಿದ್ದರು.

## ಸೋನಿಯಾ ಗಾಂಧಿ ಅನುದಾನದ ಶೇ.70ರಷ್ಟು ಅಲ್ಪಸಂಖ್ಯಾತರಿಗೆ : ಷಾ

ರಾಯ್‌ಬರೇಲಿ, ಮೇ 12 - ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ತಮ್ಮ ಸಂಸದರ ಅನುದಾನದ ಶೇ.70ರಷ್ಟನ್ನು ಅಲ್ಪಸಂಖ್ಯಾತ ಸಮುದಾಯಕ್ಕೆ ನೀಡಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈ ಬಾರಿ ತಮ್ಮ ತಾಯಿ ಎರಡು ದಶಕಗಳ ಕಾಲ ಪ್ರತಿನಿಧಿಸಿದ್ದ ರಾಯ್‌ಬರೇಲಿಯಿಂದ ಸ್ಪರ್ಧಿಸುತ್ತಿದ್ದಾರೆ. ಸೋನಿಯಾ ಗಾಂಧಿ ಅವರು ಈ ಬಾರಿ ರಾಜ್ಯಸಭೆಗೆ ತೆರಳಿದ್ದಾರೆ.

ಪ್ರತಾಪ್‌ಘರ್‌ನಲ್ಲಿ ಆಯೋಜಿಸಿದ್ದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅಮಿತ್ ಷಾ, ನೀವು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷಕ್ಕೆ ಅವಕಾಶ ಕೊಟ್ಟಿದ್ದಿರಿ. ಆದರೆ, ಅಭಿವೃದ್ಧಿ ಕೆಲಸಗಳಾಗಿಲ್ಲ. ಕಾಂಗ್ರೆಸ್ ಪಕ್ಷ ಅಭಿವೃದ್ಧಿಯಲ್ಲಿ ನಂಬಿಕೆ ಇರಿಸಿಲ್ಲ ಎಂದು ಆರೋಪಿಸಿದರು.

## ಅಹಮದಾಬಾದ್ ವಿಮಾನ ನಿಲ್ದಾಣಕ್ಕೆ ಹುಸಿ ಬೆದರಿಕೆ

ಅಹಮದಾಬಾದ್, ಮೇ 12 – ಅಹಮದಾಬಾದ್ ವಿಮಾನ ನಿಲ್ದಾಣಕ್ಕೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಲಾಗಿದೆ. ಆದರೆ, ಇದು ಹುಸಿ ಬೆದರಿಕೆ ಎಂಬುದು ಪರಿಶೀಲನೆಯ ನಂತರ ಪತ್ತೆಯಾಗಿದೆ. ಗುರುತಿಸಲಾಗದ ವ್ಯಕ್ತಿಯೊಬ್ಬರು ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆದರಿಕೆಯ ಇ-ಮೇಲ್ ಕಳಿಸಿದ್ದಾಗಿ ಪೊಲೀಸರು ಹೇಳಿದ್ದಾರೆ.

# ನಗರದಲ್ಲಿ ಶ್ರೀ ಶಂಕರ ಭಗವತ್ಪಾದರ ಜಯಂತ್ಯೋತ್ಸವದಲ್ಲಿ ಉಪನ್ಯಾಸ



ದಾವಣಗೆರೆ, ಮೇ 12- ಶ್ರೀ ಶಂಕರ ಭಗವತ್ಪಾದರ ಜಯಂತ್ಯೋತ್ಸವವು ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಇಂದು ಆರಂಭಗೊಂಡಿದ್ದು, ಶಿವಮೊಗ್ಗದ ಶ್ರೀ ವಿದ್ವಾನ್ ಎಂ.ಎಸ್. ವಿನಾಯಕ್ ಉಪನ್ಯಾಸ ನೀಡಿದರು.

ವಿನಾಯಕ್ ಅವರು ತಮ್ಮ ಉಪನ್ಯಾಸದಲ್ಲಿ, ಶ್ರೀ ಶಂಕರಾಚಾರ್ಯರ ಕುರಿತು ಮತ್ತು ಭಾರತಕ್ಕೆ ಶ್ರೀ ಶಂಕರರ ಕೊಡುಗೆ ಎಂಬ ವಿಚಾರದ ಬಗ್ಗೆ ವಿವರಿಸಿದರು.

ಶಂಕರಾಚಾರ್ಯರು ಹುಟ್ಟಿದ ನಂತರ ಅವರು ಭಾರತದಾದ್ಯಂತ ಕಾಲ್ನಡಿಗೆಯಲ್ಲಿ ನಡೆದಾಡಿ ಹಾಗೂ ಭಾರತದ ವೈದಿಕ ಪರಂಪರೆ ಮತ್ತು ವೇದ ಉಪನಿಷತ್ತುಗಳ ಬಗ್ಗೆ, ಅಧ್ಯಾತ್ಮ ಜೀವನದ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿಸಿಕೊಟ್ಟರು. ಅವರೇ ಭಾರತಕ್ಕೆ, ನಮ್ಮ ಸನಾತನ ಧರ್ಮಕ್ಕೆ ಶಿವನ ಪೂಜೆ ಬಗ್ಗೆ ತಿಳಿಸಿಕೊಟ್ಟಿದ್ದಾರೆ, ಅಧ್ಯಾತ್ಮ ಸಾಧನೆ ಎಲ್ಲಾ ವರ್ಗದವರಿಗೂ ಸಂಬಂಧಪಟ್ಟದ್ದು, ಅದನ್ನು ಉಳಿಸಿಕೊಂಡು ಹೋಗುವಂತೆ ಶ್ರೀ ಶಂಕರರ ನುಡಿಯನ್ನು ಈ ಸಂದರ್ಭದಲ್ಲಿ ತಿಳಿಸಿಕೊಟ್ಟರು.

ಉಪನ್ಯಾಸದ ನಂತರ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವ ನಡೆಯಿತು.

ಈ ಸಂದರ್ಭದಲ್ಲಿ ಶಂಕರ ಸೇವಾ ಸಂಘದ ಉಪಾಧ್ಯಕ್ಷ ಮೋತಿ ಸುಬ್ರಮಣ್ಯ, ಕಾರ್ಯದರ್ಶಿ ಶ್ರೀನಿವಾಸ್ ಜೋಶಿ, ವಿನಾಯಕ ಜೋಶಿ, ಅನಿಲ್ ಬಾರೆಂಗಳ್, ಚೈತನ್ಯ ನಾರಾಯಣಸ್ವಾಮಿ, ರಮೇಶ್ ಪಾಟೀಲ್, ಬಾಲಕೃಷ್ಣ ವೈದ್ಯ, ಪಟ್ಟಾಭಿ ರಾಮನ್ ರಾಘವೇಂದ್ರ, ಪುರೋಹಿತ ಗಣೇಶ್ ಭಟ್, ಪುಟ್ಟಸ್ವಾಮಿ, ಹರೀಶ್, ಎಸ್.ಕೆ. ಕುಲಕರ್ಣಿ ಹಾಗೂ ಇತರರು ಹಾಜರಿದ್ದರು.

# ಸಮಾನತೆಯ ಹರಿಕಾರ ಬಸವಣ್ಣ : ಅರುಣ್ ಕುಮಾರ್



ದಾವಣಗೆರೆ, ಮೇ 12 - ಬಸವಣ್ಣನವರು ಸಮಾನತೆ, ಜಾತ್ಯತೀತ ಮತ್ತು ಭ್ರಾತೃತ್ವದ ಸಮಾಜ ನಿರ್ಮಿಸುವ ಪಣ ತೊಟ್ಟು ಜಾತಿ, ಧರ್ಮ ಹಾಗೂ ಲಿಂಗ ಭೇದವನ್ನು ತಿರಸ್ಕರಿಸಿ ಸಾಮಾಜಿಕ ಕ್ರಾಂತಿಗೆ ಕಾರಣರಾಗಿದ್ದಾರೆ ಎಂದು ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್ ಹೇಳಿದರು.

ನಗರದ ಕೆ.ಬಿ. ಬಡಾವಣೆಯಲ್ಲಿನ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಕಾರ್ಯಾಲಯದಲ್ಲಿ ಶುಕ್ರವಾರ ನಡೆದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರು ಸಮಬಾಳಿನ ಸಮತೆಯ ಸಮಾಜ ಕಟ್ಟಲು ಹೋರಾಡಿದ್ದಾರೆ ಮತ್ತು ಕಾಯಕ ಜೀವಿಗಳು, ದಲಿತರು, ದಮನಿತರು, ಮಹಿಳೆಯರು ವಚನ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ ಮಹಾ ಮಾನವತಾವಾದಿಯಾಗಿದ್ದಾರೆ ಎಂದು ಹೇಳಿದರು.

ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಮಾತನಾಡಿ, ಬಸವಣ್ಣನವರು ಎಲ್ಲರಿಗೂ ವೈಚಾರಿಕ ಗುರುವಾಗಿದ್ದು, ಅಂಧಶ್ರದ್ಧೆ, ಮೂಢನಂಬಿಕೆ, ಶೋಷಣೆಗಳ ವಿರುದ್ಧ ಹೋರಾಟ ನಡೆಸಿ, ಜನರನ್ನು ಜಾಗೃತಗೊಳಿಸಿದರು ಎಂದರು.

ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಗೌರವಾಧ್ಯಕ್ಷ ಎಂ.ಎಸ್. ನಾಗರಾಜಪ್ಪ ಮಾತನಾಡಿ, ಬಸವಣ್ಣವರ ವಚನಗಳೇ ಸಂವಿಧಾನದ ಆಶಯಗಳಾಗಿದ್ದು, ಅವರು ನಿರ್ಮಿಸಿದ ಅನುಭವ ಮಂಟಪ ಪ್ರಜಾಪ್ರಭುತ್ವದ ಮೊದಲ ಸಂಸತ್ತು ಆಗಿತ್ತು ಎಂದು ಹೇಳಿದರು.

ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ ಮಾತನಾಡಿ, ವಚನ ಚಳುವಳಿ ಮೂಲಕ ಮಹಿಳಾ ಹೋರಾಟಗಾರರನ್ನು ಬೆಳಕಿಗೆ ತಂದ ಶರಣರ ಪರಂಪರೆ ನಮಗೆಲ್ಲರಿಗೂ ಆದರ್ಶ ಎಂದರು.

ಸಾಹಿತಿ ಡಾ.ಎ. ಶಿವನಗೌಡ ಕಡಬಗೆರೆ, ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ಎನ್.ಎಸ್.ರಾಜು, ಸಾಹಿತಿ ಎಸ್.ಸಿದ್ದೇಶ್ ಕುರ್ಕಿ, ಎಂ.ಎಸ್.ಶಿವಕುಮಾರ ಸ್ವಾಮಿ, ವಕೀಲ ಆರ್.ಯೋಗೇಶ್ವರಪ್ಪ ಇದ್ದರು.


**ದಾವಣಗೆರೆ ಷುಗರ್ ಕಂಪನಿ ಲಿಮಿಟೆಡ್., ಕುಕ್ಕುವಾಡ.**

**ಶೇರುದಾರರ ವಿಶೇಷ ಮಹಾಸಭೆ**

ದಾವಣಗೆರೆ ಷುಗರ್ ಕಂಪನಿ ಲಿಮಿಟೆಡ್., ಕುಕ್ಕುವಾಡ ಇದರ ಷೇರುದಾರರ ವಿಶೇಷ ಮಹಾಸಭೆಯನ್ನು ದಿನಾಂಕ : 15.05.2024 ರ ಬುಧವಾರದಂದು ಬೆಳಗ್ಗೆ 11.00 ಘಂಟೆಗೆ ತೊಗಟವೀರ ಕಲ್ಯಾಣ ಮಂಟಪ, ಎಂಸಿಸಿ "ಎ" ಬ್ಲಾಕ್, ದಾವಣಗೆರೆಯಲ್ಲಿ ಕರೆಯಲಾಗಿದೆ. ಆದುದರಿಂದ ಸಮಸ್ತ ಷೇರುದಾರರು, ತಪ್ಪದೇ ಈ ವಿಶೇಷ ಮಹಾಸಭೆಗೆ ಹಾಜರಾಗಿ ಸಭೆಯ ಕಲಾಪಗಳಲ್ಲಿ ಭಾಗವಹಿಸಲು ಕೋರಿಕೊಳ್ಳುತ್ತೇವೆ.

ತಮ್ಮ ವಿಶ್ವಾಸಿ,

ಎಸ್.ಎಸ್.ಗಣೇಶ್, ವ್ಯವಸ್ಥಾಪಕ ನಿರ್ದೇಶಕರು

# ಮೇಗಳಪೇಟೆಯಲ್ಲಿ ಬಸವೇಶ್ವರ ದೇವರ ಸಂಭ್ರಮದ ರಥೋತ್ಸವ



ಹರಪನಹಳ್ಳಿ, ಮೇ 12- ಇಲ್ಲಿನ ಮೇಗಳ ಪೇಟೆಯ ಬಸವೇಶ್ವರ ದೇವರ ರಥೋತ್ಸವವು ಶುಕ್ರವಾರ ಸಂಜೆ ಭಕ್ತರ ಹರ್ಷೋದ್ಗಾರದ ಮಧ್ಯೆ ಸಡಗರ ಸಂಭ್ರಮದಿಂದ ಜರುಗಿತು.

ಬಸವೇಶ್ವರ ಜಯಂತಿ ಪ್ರಯುಕ್ತ ಬೆಳಗ್ಗೆಯಿಂದಲೇ ದೇವರಿಗೆ ವಿಶೇಷ ಪೂಜಾಲಂಕಾರ ಹಾಗೂ ಅಭಿಷೇಕ ಕಾರ್ಯಕ್ರಮ ನಡೆದವು. ಭಕ್ತರು ತೆಂಗಿನಕಾಯಿ ಹಾಗೂ ನೈವೇದ್ಯ ಅರ್ಪಿಸಿ ದೇವರ ದರ್ಶನ ಪಡೆದರು.

ವಿವಿಧ ಬಗೆಯ ಪುಷ್ಪ ಹಾಗೂ ರಂಗು ರಂಗಿನ ವಸ್ತ್ರಾಲಂಕಾರಗೊಂಡ ರಥೋತ್ಸವ ಜರುಗುವಾಗ ಭಕ್ತರ ಜಯಘೋಷದ ಸಂಭ್ರಮ ಮುಗಿಲು ಮುಟ್ಟಿತ್ತು.

ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಭಕ್ತರು ತೇರಿಗೆ ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ಇದೇ ವೇಳೆ ಜೋಡೆತ್ತುಗಳ ಮೆರವಣಿಗೆ ರಥೋತ್ಸವದ ಸೊಬಗನ್ನು ಇಮ್ಮಡಿಗೊಳಿಸಿತು.

ವೀರಶೈವ ಮಹಾಸಭಾದ ಅಧ್ಯಕ್ಷ ಎಂ. ರಾಜಶೇಖರ್, ಪಂಚಮಸಾಲಿ ಸಮಾಜದ ಅಧ್ಯಕ್ಷ ಪಿ. ಬೆಟ್ಟನಗೌಡ್ರು, ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕೆ. ಉಚ್ಚಂಗೆಪ್ಪ, ಪಿ. ಎಲ್.ಡಿ. ಬ್ಯಾಂಕ್‌ನ ಅಧ್ಯಕ್ಷ ಪಿ.ಬಿ. ಗೌಡ, ನಿವೃತ್ತ ಇಓ ಎಚ್.ಎಂ.ಕೊಟ್ರಯ್ಯ, ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಬಿ. ರಾಜಶೇಖರ್, ಮುಖಂಡರಾದ ಕೌಟಿ ಮಂಜುನಾಥ್, ಜಾಲಿಮರದ ಅಜ್ಜಣ್ಣ, ಜೆ. ಸೋಮಶೇಖರ್, ಗುರುಪ್ರಸಾದ್, ಚಂದ್ರಶೇಖರ್ ಸೇರಿದಂತೆ, ಗಣ್ಯರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಬೇಸಿಗೆ ಕಾಲದಲ್ಲಿ ಅಲರ್ಜಿ ಹಾಗೂ ದಮ್ಮಿನ ರೋಗಿಗಳ ವಿಶೇಷ ಕಾಳಜಿ



ಕಳೆದ ಹಲವು ದಿನಗಳಿಂದ ಬಿಸಿಲಿನ ಪ್ರಕೋಪ ಮಿತಿ ಮೀರಿದ್ದು 40 ಡಿಗ್ರಿ ದಾಟುತ್ತಿದೆ, ಇಂತಹ ಸಮಯದಲ್ಲಿ ಉಬ್ಬಸ ಹಾಗೂ ಡಸ್ಟ್ ಅಲರ್ಜಿ ರೋಗಿಗಳಿಗೆ ವಿಶೇಷ ಕಾಳಜಿಯ ಅವಶ್ಯಕತೆ ಇದೆ.

COPD ಕಾಯಿಲೆಯು ಅಸ್ತಮಾಗಿಂತ ಭಿನ್ನವಾಗಿದ್ದು, ಇದು 40 ವರ್ಷ ಮೇಲ್ಪಟ್ಟವರಲ್ಲಿ ಕಂಡು ಬರುತ್ತದೆ. (ಅಸ್ತಮಾ, ಅಲರ್ಜಿ ಕಾಯಿಲೆಗಳು ಸಣ್ಣ ವಯಸ್ಸಿಗೇ ಶುರು ಆಗುತ್ತದೆ).

ಅಸ್ತಮಾ ಹಾಗೆ COPD (Chronic Obstructive Pulmonary Disease) ಅಲರ್ಜಿ ಸಂಬಂಧ ಬರುವುದಿಲ್ಲ. ವಾತಾವರಣದಲ್ಲಿ ಸಣ್ಣ ಕಣಗಳು (ಕಾಟನ್ ಮಿಲ್) ಇರುವೆಡೆ ದೀರ್ಘಕಾಲ ಕೆಲಸ ಮಾಡಿದವರಿಗೆ, ಸುದೀರ್ಘ ಧೂಮಪಾನಿಗಳಿಗೆ, ಅನಿಯಂತ್ರಿತ ಅಸ್ತಮಾ ತುಂಬಾ ವರ್ಷ ಇದ್ದರೆ, ಈ ಹಿಂದೆ TB ಕಾಯಿಲೆ ಆಗಿದ್ದರೆ, ಅವರಿಗೆ ಬರುವ ಉಬ್ಬಸ ಕಾಯಿಲೆಯೇ COPD.

**ಸಮಸ್ಯೆಗಳು :** ●ಉಬ್ಬಸದ ಸಿ.ಓ.ಪಿ.ಡಿ. ಕಾಯಿಲೆ ರೋಗಿಗಳಿಗೆ ವಾತಾವರಣದಲ್ಲಿ ಧಗೆ ಏರಿದಂತೆ ತೀವ್ರ ಉಸಿರಾಟದ ತೊಂದರೆ ಶುರು ಆಗುತ್ತದೆ.

(ನೆನಪಿರಲಿ: ಅಸ್ತಮಾ ರೋಗಿಗಳಿಗೆ ವಿಭಿನ್ನವಾಗಿ ಚಳಿ ಮತ್ತು ಮಳೆಗಾಲದಲ್ಲಿ ಈ ತೊಂದರೆ ಆಗುತ್ತದೆ)

●COPD ರೋಗಿಗಳಿಗೆ ಈ ಸಂದರ್ಭದಲ್ಲಿ ನಿತ್ಯ ಕರ್ಮಗಳಾದ ಸ್ನಾನ ಶೌಚ ಗಳಿಗೂ ತೀವ್ರ ಉಬ್ಬಸ ಬರುತ್ತದೆ.

●ಹೆಚ್ಚು ನಡೆದಾಡಲು ಮತ್ತು ಮೆಟ್ಟಿಲು ಹತ್ತಲು ಸಾಧ್ಯವಾಗುವುದಿಲ್ಲ.

●ಡಸ್ಟ್ ಅಲರ್ಜಿ, ನೆಗಡಿ, ಕೆಮ್ಮಿನ ರೋಗಿಗಳಿಗೆ ಬೇಸಿಗೆ ಕಾಲದಲ್ಲಿ ಧೂಳಿನಿಂದ ಈ ಕಾಯಿಲೆ ಉಲ್ಬಣಿಸುತ್ತದೆ.

●ಟ್ರಾಫಿಕ್ ಧೂಳು ಹಾಗೂ ಹೊಗೆಗೆ ಅಲರ್ಜಿ ರೋಗಿಗಳಿಗೆ ನೆಗಡಿ, ಕೆಮ್ಮು ಸತತವಾಗಿ ಕಾಡುವ ಸಾಧ್ಯತೆ ಇರುತ್ತದೆ.

●ನಿರ್ಜಲೀಕರಣ (Dehydration) ಬೇಸಿಗೆಯಲ್ಲಿ ತುಂಬಾ ಬೆವರು ಉಂಟಾಗಿ ವಯಸ್ಸಾದ COPD ಕಾಯಿಲೆ ರೋಗಿಗಳು ತುಂಬಾ ಸುಸ್ತು ಅನುಭವಿಸುತ್ತಾರೆ

**ಸಲಹೆಗಳು :** ●COPD ರೋಗಿಗಳು ಯಾವ ಕಾರಣಕ್ಕೂ ಸೂರ್ಯನ ಬಿಸಿಲಲ್ಲಿ ಹೊರಗೆ ಬರ ಕೂಡದು.

●COPD ರೋಗಿಗಳು ಮನೆಯ ಅತ್ಯಂತ ತಂಪಾದ ಹಾಗೂ ಗಾಳಿ ಆಡುವ ಕೊಠಡಿಯಲ್ಲಿ ಇರಬೇಕು. ಎಸಿ ಅಥವಾ ಫ್ಯಾನ್ ಸೌಲಭ್ಯ ಇದ್ದರೆ ಬಳಸಿ.

●ಸಾಕಷ್ಟು ಬಾರಿ ನೀರು ಅಥವಾ ಇನ್ನಿತರೆ ಜ್ಯೂಸ್, ಎಳನೀರು ಸೇವಿಸಬೇಕು.

●ಉಬ್ಬಸ ಹೆಚ್ಚಾದಾಗ ತಕ್ಷಣ ಸರಿ ಪಡಿಸಲು ಮನೆಯಲ್ಲಿ ಒಂದು ನೆಬ್ಯುಲೈಸರ್ ಇರಬೇಕು.

●ತುಂಬಾ ಓಡಾಡುವುದು ಹಾಗೂ ಮೆಟ್ಟಿಲು ಹತ್ತುವುದು ಸೂರ್ಯ ಮುಳುಗುವ ತನಕ ಬೇಡ.

●COPD ರೋಗಿಗಳು ರಾತ್ರಿ ಮಲಗುವಾಗ ತಮ್ಮ ಪಕ್ಕ ಒಂದು ಬೆಲ್ ಅಥವಾ ಗಂಟೆ ಇಟ್ಟುಕೊಂಡಿರಬೇಕು, ಏಕೆಂದರೆ ಬೆಳಗಿನ ಜಾವದಲ್ಲಿ ತೀವ್ರ ಬಿಸಿಲಿನ ವಾತಾವರಣ ಸ್ವಲ್ಪ ತಂಪಾಗಿ ಬದಲು ಆಗುವುದರಿಂದ ಉಸಿರಾಟದ ಸಮಸ್ಯೆ ಕಾಣಿಸುವ ಸಾಧ್ಯತೆ ಇರುತ್ತದೆ. ಆಗ ಬೆಲ್ ಭಾರಿಸಿ ಮನೆಯವರಿಗೆ ಕರೆಯಬಹುದು.

●ಸಾಧ್ಯ ಆದಷ್ಟು ನಿಮ್ಮ ನಿತ್ಯ ಕರ್ಮಗಳನ್ನು ಬೆಳಿಗ್ಗೆ ಸೂರ್ಯ ಮೇಲೇರುವ ಮೊದಲೇ ನಿರ್ವಹಿಸಿ.

●ಸಮಸ್ಯೆ ಉಲ್ಬಣಿಸಿದರೆ ತಕ್ಷಣ ನಿಮ್ಮ ವೈದ್ಯರನ್ನು ಕಾಣಿ.

●ಡಸ್ಟ್ ಅಲರ್ಜಿ ರೋಗಿಗಳು ಆದಷ್ಟೂ ಬಿರು ಬಿಸಿಲಲ್ಲಿ ಟ್ರಾಫಿಕ್ ನಲ್ಲಿ ಓಡಾಡುವುದು ತಪ್ಪಿಸಬೇಕು.

●ಅನಿವಾರ್ಯ ಇದ್ದರೆ ಡಸ್ಟ್ ಅಲರ್ಜಿ ರೋಗಿಗಳು ಕಡ್ಡಾಯವಾಗಿ ಫಿಲ್ಟರ್ ಇರುವ ಪೊಲ್ಯೂಷನ್ ಮಾಸ್ಕ್ ಬಳಸಿ ( ಕೋವಿಡ್ ಮಾಸ್ಕ್ ಅಲ್ಲ)

●ಅಲರ್ಜಿ ರೋಗಿಗಳು ಮನೆಯಲ್ಲಿ ಧೂಳು ಕೊಡವುವ ಅಥವಾ ಹೊಗೆ ವಾತಾವರಣ ತಪ್ಪಿಸಿ.

●ಸಮಸ್ಯೆ ಹತೋಟಿಗೆ ಬರದಿದ್ದರೆ ನಿಮ್ಮ ವೈದ್ಯರನ್ನು ಸಂಪರ್ಕಿಸಿ

**- ಡಾ. ಎನ್.ಹೆಚ್. ಕೃಷ್ಣ,** ಶ್ವಾಸಕೋಶ ಹಾಗೂ ಉಸಿರಾಟದ ಕಾಯಿಲೆಗಳ ಸಲಹಾ ವೈದ್ಯರು, ದಾವಣಗೆರೆ.
drkrishna_nh@yahoo.com

# ಶೇ.50ರಷ್ಟು ಮತ ಬಂದರೆ ಕಾನೂನು ಪರಿಣಾಮ ಸಾಧ್ಯ

**(1ನೇ ಪುಟದಿಂದ)** ಮತಗಳನ್ನೂ ಫಲಿತಾಂಶದ ವೇಳೆ ಪರಿಗಣಿಸುವ ಒತ್ತಡ ಬರಲಿದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪಿನ ನಂತರ 2013ರ ಸೆಪ್ಟೆಂಬರ್‌ನಲ್ಲಿ ಜನರಿಗೆ ನೋಟಾ ಆಯ್ಕೆ ನೀಡಲಾಗಿತ್ತು. ಕಳಂಕಿತ ಅಭ್ಯರ್ಥಿಗಳನ್ನು ಕಣಕ್ಕಿಳಿಸದಂತೆ ರಾಜಕೀಯ ಪಕ್ಷಗಳ ಮೇಲೆ ಒತ್ತಡ ಹೇರಲು ಈ ಕ್ರಮ ನೆರವಾಗಲಿದೆ ಎಂದು ಭಾವಿಸಲಾಗಿತ್ತು.

2014 ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ನೋಟಾಗೆ ಶೇ.2ಕ್ಕಿಂತ ಕಡಿಮೆ ಮತಗಳು ದೊರೆತಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎ.ಡಿ. ಆರ್.) ಸಂಘಟನೆಯ ಮುಖ್ಯಸ್ಥ ಅನಿಲ್ ವರ್ಮ ತಿಳಿಸಿದ್ದಾರೆ.

ನೋಟಾ ಆಯ್ಕೆಯನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಬೇಕಿದೆ. ಅದನ್ನು ಕಾನೂನು ಬದ್ಧವಾಗಿ ಬಲಗೊಳಿಸಬೇಕಿದೆ. ನೋಟಾಗೆ ಹೆಚ್ಚು ಮತ ದೊರೆತರೆ ಚುನಾವಣೆಯನ್ನು ರದ್ದುಗೊಳಿಸಬೇಕು. ಹೊಸದಾಗಿ ಹೊಸ ಅಭ್ಯರ್ಥಿಗಳೊಂದಿಗೆ ಚುನಾವಣೆ ನಡೆಸಬೇಕು ಎಂದವರು ಅಭಿಪ್ರಾಯಪಟ್ಟಿದ್ದಾರೆ.

2019ರ ಚುನಾವಣೆಯಲ್ಲಿ ಬಿಹಾರದ ಗೋಪಾಲ್‌ಗಂಜ್ ಕ್ಷೇತ್ರದಲ್ಲಿ ನೋಟಾಗೆ 51,660 ರಷ್ಟು ಮತ ದೊರೆತಿತ್ತು. ಇದು ಒಟ್ಟು ಮತಗಳ ಶೇ.5ರಷ್ಟಾಗಿತ್ತು.

# ನೇರಳೆ ತಾಕಿನಲ್ಲಿ ಪಾರಂಪರಿಕ ಬೀಜದ ಸಂತೆ

**(1ನೇ ಪುಟದಿಂದ)** ಜವಾರಿಯಲ್ಲೂ ಬೃಹತ್ ಗಾತ್ರದ ಇಳುವರಿ ಪಡೆಯಬಹುದು ಎಂಬುದನ್ನು ಹಲವಾರು ರೈತರು ತಿಳಿಸಿದರು.

ಕೊಂಡಜ್ಜಿಯ ನಾಗರಾಜ ಅವರು ವಿವಿಧ ರೀತಿಯ ನಿಂಬೆಹಣ್ಣುಗಳ ಸಸಿಗಳನ್ನು ಮಾರಾಟಕ್ಕೆ ತಂದಿದ್ದರು. ಇದರಲ್ಲಿ ಸೀಡ್‌ಲೆಸ್ ನಿಂಬೆಹಣ್ಣೂ ಸೇರಿತ್ತು. ಬೀಜ ಮೇಳದಲ್ಲಿ ಬೀಜ ರಹಿತ ನಿಂಬೆಯ ಮಾರಾಟ ಮತ್ತೊಂದು ವಿಶೇಷವೂ ಆಗಿತ್ತು.

ಪುತ್ತೂರಿನ ಪಾಂಡುರಂಗ ಭಟ್ ಅವರು ಬಿದಿರು ಅಕ್ಕಿಯನ್ನು ಮಾರಾಟಕ್ಕೆ ತಂದಿದ್ದರು. ಈ ಅಕ್ಕಿ 60 ವರ್ಷಗಳಿಗೆ ಒಮ್ಮೆ ಮಾತ್ರ ಸಿಗುತ್ತದೆ. ಈಗ ಮಾರಲು ತಂದಿರುವ ಭತ್ತ 12 ವರ್ಷ ಹಳೆಯದು. ಸರಿಯಾಗಿ ದಾಸ್ತಾನಿಟ್ಟರೆ ಈ ಅಕ್ಕಿ ಕೆಡುವುದಿಲ್ಲ ಎಂದು ಹೇಳಿದರು. ಕುಂಬಳೂರಿನ ಆಂಜನೇಯ ಅವರು 120 ವಿಧದ ಭತ್ತ ಸೇರಿದಂತೆ ಹಲವು ಕಾಳುಗಳ ಬೀಜಗಳನ್ನು ಪ್ರದರ್ಶನಕ್ಕೆ ತಂದಿದ್ದರು.

## ಮತ ಕೊಟ್ಟರೆ ಜೈಲಿಗೆ ಹೋಗುವ ಪರಿಸ್ಥಿತಿ ಬಾರದು : ಕೇಜ್ರಿವಾಲ್

ನವದೆಹಲಿ, ಮೇ 12 - ಆಮ್ ಆದ್ಮಿ ಪಾರ್ಟಿಗೆ ಮತ ನೀಡಿದರೆ ನಾನು ಮತ್ತೆ ಜೈಲಿಗೆ ಹೋಗುವ ಪರಿಸ್ಥಿತಿ ಬರುವುದಿಲ್ಲ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. 20 ದಿನಗಳ ನಂತರ ನಾನು ಜೈಲಿಗೆ ಹೋಗಬೇಕು. ನೀವು ಆಮ್ ಆದ್ಮಿ ಪಾರ್ಟಿಗೆ ಮತ ನೀಡಿದರೆ, ನಾನು ಮತ್ತೆ ಜೈಲಿಗೆ ಹೋಗುವ ಪರಿಸ್ಥಿತಿ ಬರುವುದಿಲ್ಲ ಎಂದು ರೋಡ್‌ಶೋದಲ್ಲಿ ಪಾಲ್ಗೊಂಡಿದ್ದ ಕೇಜ್ರಿವಾಲ್ ಹೇಳಿದ್ದಾರೆ. ಕೇಜ್ರಿವಾಲ್‌ಗೆ ಜೂನ್ 1ರವರೆಗೆ ಮಧ್ಯಂತರ ಜಾಮೀನು ನೀಡಲಾಗಿದೆ.ಜೂನ್ 2ರಂದು ಅವರು ಶರಣಾಗಬೇಕಿದೆ. ನಾನು ಜೈಲಿಗೆ ಹೋದರೆ ಬಿಜೆಪಿ ಉಚಿತ ವಿದ್ಯುತ್ ನಿಲ್ಲಿಸಲಿದೆ. ಶಾಲೆಗಳ ಸೌಲಭ್ಯ ಕಡಿತಗೊಳಿಸಲಿದೆ. ಆಸ್ಪತ್ರೆಗಳು ಹಾಗೂ ಮೊಹಲ್ಲಾ ಕ್ಲಿನಿಕ್‌ಗಳನ್ನು ಮುಚ್ಚಲಿದೆ ಎಂದವರು ಆರೋಪಿಸಿದ್ದಾರೆ.

## ಸಣ್ಣ ಪಕ್ಷಗಳ ವಿಲೀನಕ್ಕೆ ಥರೂರ್ ಬೆಂಬಲ

ಮುಂಬೈ, ಮೇ 12 - ಸಣ್ಣ ಪಕ್ಷಗಳು ಕಾಂಗ್ರೆಸ್‌ನಲ್ಲಿ ವಿಲೀನವಾಗಬೇಕು ಎಂಬ ವಾದವನ್ನು ಕಾಂಗ್ರೆಸ್ ಹಿರಿಯ ನಾಯಕ ಶಶಿ ಥರೂರ್ ಬೆಂಬಲಿಸಿದ್ದಾರೆ. ಸಿದ್ಧಾಂತ ಒಂದೇ ಇರುವಾಗ ಪಕ್ಷಗಳು ಏಕೆ ಪ್ರತ್ಯೇಕವಾಗಿರಬೇಕು? ಏನಾಗುತ್ತದೋ ಕಾದು ನೋಡೋಣ ಎಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಥರೂರ್ ಹೇಳಿದ್ದಾರೆ. ಮುಂದಿನ ಕೆಲ ವರ್ಷಗಳಲ್ಲಿ ಹಲವಾರು ಪ್ರಾಂತೀಯ ಪಕ್ಷಗಳು ಕಾಂಗ್ರೆಸ್‌ಗೆ ಇನ್ನಷ್ಟು ಹತ್ತಿರವಾಗಲಿವೆ ಇಲ್ಲವೇ ವಿಲೀನವಾಗಲಿವೆ ಎಂದು ಹಿರಿಯ ರಾಜಕಾರಣಿ ಶರದ್ ಪವಾರ್ ಹೇಳಿದ್ದರು.

## ತಾಯಿಯ ಒಡಲು



ಮಮತೆಯ ಕಡಲು
ಚುಂಬಿಸಿದಳು ರಾಗದಲಿ
ಪ್ರೀತಿಯಲಿ ಹರಸಿದಳು
ನಗುವ ಕಡಲಲಿ

ತಾಯಿ ತಾನೇ ಮೊದಲ ಗುರುವು
ಅಕ್ಷರವ ತಿದ್ದಿಸಿದಾಕೆ ತಿದ್ದಿ
ಬುದ್ದಿ ಹೇಳಿದಾಕೆ, ಅವಳೇ ತಾನೆ
ನನ್ನ ಪೂಜ್ಯ ಗುರುವು, ಬದುಕಿನ
ಹೆಜ್ಜೆ ಕಳಿಸಿದಾಕೆ ಏನೆಂದು
ನೆನೆಯಲಿ ನಿನ್ನ ಲೆಕ್ಕವಿಲ್ಲ

ಅಂಬೆಗಲಿಡಿಸಿದಾಕೆ, ಆಕಾಶದಲಿ
ಚುಕ್ಕಿ ಚಂದ್ರಮನ ತೋರಿಸಿ
ತುತ್ತನಿಟ್ಟು ನಲಿ ದಾಕೆ
ಬೀಳುವಾಗ ಎತ್ತಿದಾಕೆ
ಕೆಸರಾಲ್ಲಡಿದಾಗ ಮಜ್ಜನ ವ
ಮಾಡಿಸಿದಾಕೆ ಏನೆಂದು
ನೆನೆಯಲಿ ನಿನ್ನ ಅಮ್ಮ

ಜಗವೆಲ್ಲ ನಕ್ಕರು ನೀ ನನ್ನ
ಅಪ್ಪಿಕೊಂಡೆ, ಭೂಮಿ ಬಿರಿದರು
ನನ್ನ ರಕ್ಷಿಸಿದೆ, ನಿನ್ನ ತ್ಯಾಗದಲಿ
ನನ್ನ ಉನ್ನತಿಯ ಬಯಸಿದೆ
ನನ್ನೆಲ್ಲ ಸಾಧನೆ ನಿನಗೆ ಅರ್ಪಣೆ

ನಿನಗಾರು ಸಮ, ನೀನು
ಭೂಮಿಯಾಕಾಶ, ಎಲ್ಲ ದೇವರು
ನಿನ್ನ ಮೊಗದಿ ನಿನಗಾರು ಸರಿ ಸಾಟಿಯಿಲ್ಲ,
ನಿನ್ನ ಚರಣಕೆ
ನನ್ನ ಅನಂತ ಕೋಟಿ ನಮನಗಳು
ನಮೋ ನಮಃ

**- ಶಕುಂತಲ ಜಿ ಕೆ**

## ಅಮ್ಮ ಎಂದರೆ ಅಮೃತ !

ಉಸಿರು ಕೊಟ್ಟು ಉಸಿರಾದವಳು
ನೀನಲ್ಲವೇ ಅಮ್ಮ;

ನಿನ್ನ ಗರ್ಭದಲ್ಲಿ ನನ್ನ ಧರಿಸಿ
ಹೊತ್ತು, ನಾ ಒದ್ದಾಗ ಸಂತೋಷ ಪಟ್ಟವಳಲ್ಲವೇ!

ತೊದಲ ನುಡಿಗೆ ಕಾಯುತ್ತಿದ್ದವಳಲ್ಲವೇ ನೀ,ನಿನ್ನ
ನಿರೀಕ್ಷೆ ಯಾರಿಗೂ ಇರದು;

ನನ್ನ ಅಂಗಾಲ ತೊಳೆದು,
ಅದರಲ್ಲಿ ಬೆಳ್ಳಿ ನೋಡಿದವಳು,
ನೀ ನನಗೆ ಬೆಳ್ಳಿ ಮೋಡವಾದೆ!!

ನನ್ನ ದೇವರು ಎಂದವಳು,ನನ್ನ
ಸ್ವಾಮಿ ಎಂದವಳು, ನಮ್ಮಪ್ಪ ಎಂದವಳು,
ನೀ ನನ್ನೆಲ್ಲ ಉಸಿರು

ಅಪ್ಪ ತಂದ ಸಿಹಿಯನ್ನು ರಾತ್ರಿ
ಎಬ್ಬಿಸಿ ತಿನ್ನಿಸಿ, ಖುಷಿಪಟ್ಟ
ಆ ಕಣ್ಣುಗಳು ಕಾಣದಾದವು !!!

ನಿನ್ನ ಉಸಿರು ನಿಂತಾಗ, ನನ್ನ
ತಂಗಿ ತಮ್ಮನ ಮಡಿಲು ಸಾಕಾಯಿತೇ,
ನನ್ನ ಮಡಿಲೇ ನೀ

ನಿನ್ನೆ ನನ್ನ ಉಸಿರು ಕಟ್ಟುವಾಗ
ನೀ ಮರು ಉಸಿರು ಕೊಟ್ಟಂತಾಗಿ
ಅಳು ನಿಲ್ಲಲಿಲ್ಲ !

ಅಮ್ಮ ನೀನಲ್ಲವೇ ನನ್ನಮ್ಮ
ನೋಯಿಸುವುದಿಲ್ಲ ಬಾ ಈ
ಭುವಿಗೆ ಮತ್ತೊಮ್ಮೆ!

ನೀ ಬಾರದೆ ಹೋದರೆ ನಿನ್ನ ಮಡಿಲಿಗೆ
ನನ್ನಾದರು ಸೇರಿಸಿಕೊ ತಾಯಿ !

**- ರೇವಣ್ಣ ಬಳ್ಳಾರಿ,** ನ್ಯಾಯವಾದಿ, ದಾವಣಗೆರೆ.

# ಬಸವಣ್ಣನ ವಿಚಾರಗಳು ಯುವ ಸಮೂಹಕ್ಕೆ ಪಸರಿಸಲಿ

## ಜಗಳೂರಿನಲ್ಲಿ ವಕೀಲ ಬಸವರಾಜ್



ಜಗಳೂರು, ಮೇ 12- ವಚನ ಸಾಹಿತ್ಯದ ಮೂಲಕ ವೈಚಾರಿಕತೆ, ಸಾಮಾಜಿಕ ಸಮಾನತೆಗಾಗಿ ಅವಿರತ ಶ್ರಮಿಸಿದ ವಿಶ್ವಗುರು ಬಸವಣ್ಣ ಅವರ ವಿಚಾರಗಳು ಯುವ ಸಮೂಹಕ್ಕೆ ಪಸರಿಸಲಿ ಎಂದು ತಾ.ಪಂ. ಮಾಜಿ ಸದಸ್ಯ ಹಾಗೂ ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಮರೇನಹಳ್ಳಿ ವಕೀಲ ಬಸವರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಪ್ರೇರಣಾ ಚರ್ಚ್ ಸಭಾಂಗಣದಲ್ಲಿ ಮಾನವ ಬಂಧುತ್ವ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ 891 ನೇ ವಿಶ್ವಗುರು ಬಸವಣ್ಣ ಜಯಂತ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

'ಆರ್ಥಿಕ ಸಮಾನತೆ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಏಕತೆಯಂತಹ ಶ್ರೇಷ್ಠ ಮತ್ತು ಉದಾತ್ತ ಧ್ಯೇಯಗಳನ್ನು ಮೂಲಮಂತ್ರವನ್ನಾಗಿಸಿಕೊಂಡು, ಪ್ರಜಾಪ್ರಭುತ್ವ ತಳಹದಿಯ ಮೇಲೆ ನಿರ್ಮಿತಗೊಂಡ ಅನುಭವ ಮಂಟಪ ಪ್ರಥಮ ಸಂಸತ್ತು. ಅಂಬೇಡ್ಕರ್ ಮತ್ತು ವಿಶ್ವಗುರು ಬಸವಣ್ಣ ಅವರನ್ನು ಕೇವಲ ಒಂದು ವರ್ಗಕ್ಕೆ ಸೀಮಿತಗೊಳಿಸಬಾರದು' ಎಂದು ಹೇಳಿದರು.

ಪ್ರಾಂಶುಪಾಲ ನಾಗಲಿಂಗಪ್ಪ, ವಕೀಲ ಆರ್.ಓಬಳೋಬಳೇಶ್, ಹಿರಿಯ ನಾಗರಿಕ ಸಂಘದ ಅಧ್ಯಕ್ಷ ಸಿ.ತಿಪ್ಪೇಸ್ವಾಮಿ, ಮಾನವ ಬಂಧುತ್ವ ವೇದಿಕೆ ತಾಲ್ಲೂಕು ಸಂಚಾಲಕ ಧನ್ಯಕುಮಾರ್ ಮಾತನಾಡಿದರು.

ಸಮಾರಂಭದಲ್ಲಿ, ವಕೀಲರಾದ ರಂಗಪ್ಪ, ಭೂಪತಿ, ತಿಪ್ಪೇಸ್ವಾಮಿ, ಮಹಾಂತೇಶ್, ತಿಪ್ಪೇಸ್ವಾಮಿ, ರುದ್ರೇಶ್ ಮಾಜಿ ಪ.ಪಂ ಅಧ್ಯಕ್ಷ ಮಂಜುನಾಥ್, ಮರೇನಹಳ್ಳಿ ನಜೀರ್ ಅಹಮ್ಮದ್, ಎಂ.ರಾಜಪ್ಪ, ಸತೀಶ್ ಮಲೆಮಾಚಿಕೆರೆ, ಮಾದಿಹಳ್ಳಿ ಮಂಜುನಾಥ್, ರಮೇಶ್, ಓಬಳೇಶ್, ರುದ್ರೇಶ್, ವಿಜಯ್ ಕೆಂಚೋಳ್, ಕುಮಾರ ನಾಯ್ಕ ಹಾಗೂ ಮುಂತಾದವರು ಇದ್ದರು.

## ತಾಯಿ ಹಾರೈಕೆ

ಮಾತು ಮೌನವಾಗಿರಲಿ ಪ್ರೀತಿ ಸದಾ ತುಂಬಿರಲಿ
ಚಿಂತನೆಯ ಆಲೋಚನೆ ನಿನ್ನ ಬಾಳಿನಲ್ಲಿರಲಿ
ಏನಾದರೂ ಮಾಡುತ್ತಿರು ಕಾಯಕದಲ್ಲಿ ನಿಪುಣನಾಗಿರು
ಬಾಳ ಬೆಳಗಿ ನಾಡ ಬೆಳಗಿ ಮುನ್ನಡೆಯುತ್ತಿರು !

ನಿನಗೆ ನೀನೇ ಸ್ಫೂರ್ತಿಯಾಗು ನಿನ್ನ ಬಾಳ ಶಿಲ್ಪಿಯಾಗು
ವಿಶ್ವ ದೃಷ್ಟಿ; ವಿಶ್ವ ಪ್ರಜ್ಞೆ; ವಿಶ್ವ ಶಕ್ತಿ; ಕೀರ್ತಿಶಾಲಿ ನೀನಾಗು

ನಿನಗೆ ನೀನೇ ಏನೆಲ್ಲವಾಗು, ಬಾಳಿನ ಪ್ರೇರಕ ಶಕ್ತಿಯಾಗಿ
ಸಾಹಸಿಯಾಗು ಧೈರ್ಯದಿಂದ ಮುಂದೆ ಸಾಗು !

ದಿನಕರನಂತೆ ಪ್ರಜ್ವಲಿಸು ಬಾಳಿನಲ್ಲಿ ಎಂದೆಂದೂ
ಧೃತಿಗೆಡದೆ; ಭಯಪಡದೆ ಮುನ್ನುಗ್ಗು ಬಾಳಿನಲ್ಲಿ
ನಾಡ ಸಿರಿಯಾಗಿ ಬಾಳ ಬೆಳಕಾಗಿ ಮಹಾನ್ ವ್ಯಕ್ತಿಯಾಗಿ
ನನ್ನ ಬಾಳಿನ ಕುಡಿ ಅರಳಲಿ ಬೆಳೆಯಲಿ ತಾಯಿ ಹಾರೈಕೆ!

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ


**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 50x80 North, 40x60 North, 40x60 North, 40x60 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಸೈಟ್ ಮಾರಾಟಕ್ಕೆ**
ದೇವರಾಜ್ ಅರಸ್ ಬಡಾವಣೆ 'ಎ' 40x60 (EPF) ಸೈಟ್ ಮಾರಾಟಕ್ಕೆ, ವಿವೇಕಾನಂದ ಬಡಾವಣೆ - 30x50 ಸೈಟ್, ಸಣ್ಣ ಕಮರ್ಷಿಯಲ್ ಸೈಟ್ - ಮಹಾಲಕ್ಷ್ಮಿ ಲೇಔಟ್, ತ್ರಿಶೂಲ್ ಟಾಕೀಸ್ ರೋಡ್ ಕಮರ್ಷಿಯಲ್, ಬನಶಂಕರಿ ಲೇಔಟ್ - 30x50ಮನೆಗಳು - 30x40, 30x50, 40x60 ಮನೆ ಮಾರಾಟಕ್ಕೆ, ಡಾಲರ್ಸ್ ಕಾಲೋನಿ - 30x50, ವೀರೇಶ್
76765 58585

**ಪ್ಲಾಟ್ ಲೀಜ್‌ಗೆ ಇದೆ**
ದಾವಣಗೆರೆಯ ವಿದ್ಯಾನಗರದ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಪ್ಲಾಟ್ ಲೀಜ್‌ಗೆ ಇವೆ. ಸಂಪರ್ಕಿಸಿ.
99807 28533

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಬಾಡಿಗೆಗೆ, ಲೀಸ್‌ಗೆ ಇವೆ**
ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಮೂರು ಬೆಡ್ ರೂಮ್ ಮನೆಗಳು ಇವೆ. ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆಗಳಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**Property Hub**
• EC
• E-swathu
• Building Licence
• Khatha Change
96118 66449

**ಅಡುಗೆ ಮಾಡಲು ಮಹಿಳೆ ಬೇಕು**
ಸಂಪರ್ಕಿಸಿ : ಚಿಂದೋಡಿ ಲೀಲಾ ಅತಿಥಿ ನಿಲಯ C/o ಶಂಕರಲೀಲಾ ಕನ್‌ವೆನ್ಷನ್ ಹಾಲ್, ಆವರಗೆರೆ - ದಾವಣಗೆರೆ.
ಮೊ. 99164-54770

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡ್‌ಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗ 30x60, 30x60 North ಅಕ್ಕ-ಪಕ್ಕ, 30x40, 30x40 East ಅಕ್ಕ-ಪಕ್ಕ, 60x40 East, Rate - 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಳಿಗೆ ಬಾಡಿಗೆಗಿದೆ**
ಚರ್ಚ್ ರಸ್ತೆ, ಲೂರ್ಡ್ಸ್ ಬಾಯ್ಸ್ ಸ್ಕೂಲ್ ಹತ್ತಿರ, ಮೇನ್ ರೋಡ್, ಸಂಪರ್ಕಿಸಿ :
96201 62541

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಡಾಲರ್ಸ್ ಕಾಲೋನಿಯಲ್ಲಿ 40x40 South, 30x60 North, 30x46 South, 60x60 North, 30x45 North, East Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ದಾವಣಗೆರೆ ಮನೆಯಲ್ಲಿ ಅಡುಗೆ ಮಾಡಲು ಒಬ್ಬ ಮಹಿಳೆ ಅಡುಗೆಯರು ಬೇಕಾಗಿದ್ದಾರೆ.
72044 83404

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆಗಳು ಮಾರಾಟಕ್ಕೆ ಬೇಕಾಗಿವೆ**
ಆಂಜನೇಯ ಬಡಾವಣೆ ಅಥವಾ ಸಿದ್ದವೀರಪ್ಪ ಬಡಾವಣೆ ಯಲ್ಲಿ 40x60, 30x50 ಅಳತೆ ಯಲ್ಲಿ ಕಟ್ಟಿರುವ ಸುಸಜ್ಜಿತ ಮನೆಗಳು ಮಾರಾಟಕ್ಕೆ ಬೇಕಾಗಿವೆ. ಮಾರಲು ಇಚ್ಛಿಸುವವರು ಸಂಪರ್ಕಿಸಿ.
Mohan Real Estate Agencies
97424 34049

**ಶಿಕ್ಷಕಿಯರು ಬೇಕಾಗಿದ್ದಾರೆ**
B.A., B.Com., NTC, BSc., TCH (D.Ed) B.Ed..
ಮಹಮ್ಮದನ್ ಕಾನ್ವೆಂಟ್
ಮಣಿಕಂಠ ಸರ್ಕಲ್, ನಿಟುವಳ್ಳಿ. ದಾವಣಗೆರೆ.
ತಹಸೀನ್ ಕಾನ್ವೆಂಟ್
ರಝಾ-ಉಲ್-ಮುಸ್ತಫ ನಗರ, 1ನೇ ಮೇನ್, 1ನೇ ಕ್ರಾಸ್, ದಾವಣಗೆರೆ.
93411 19195, 99800 32237

**ಕೆಲಸಕ್ಕೆ ಬೇಕಾಗಿದ್ದಾರೆ**
**ಎಸ್.ಆರ್. ಕನ್‌ಸ್ಟ್ರಕ್ಷನ್ಸ್**
**MS Office**
ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಆಫೀಸ್ ಬಾಯ್ ಮತ್ತು ಲಾರಿ ಡ್ರೈವರ್ ಜೊತೆಗೆ ಭಾರೀ ಮೋಟಾರು ವಾಹನ ಚಾಲನಾ ಪರವಾನಗಿ ಇರಬೇಕು.
ಸಮಯ : ಬೆ.: 10 ರಿಂದ ಸಂ. : 6
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99991

**ಬಂಗಾರದ ಆಭರಣಗಳು**
ಯಾವುದೇ ಬೆಳ್ಳಿ, ಬಂಗಾರದ ಆಭರಣ 3% ನಿಂದ 7% ನಲ್ಲಿ ದೊರೆಯುತ್ತದೆ. ಯಾವುದೇ ಮೇಕಿಂಗ್ ಚಾರ್ಜ್ ಇರುವುದಿಲ್ಲ. ಸಂಪರ್ಕಿಸಿ:
81475 47421

**ಬೇಕಾಗಿದೆ**
ಸನ್ನಿಧಿ ಟ್ರೇಡಿಂಗ್ ಕೋ
ದಾವಣಗೆರೆ ವಿಭಾಗಕ್ಕೆ ವಾಹನ ಅಟ್ಯಾಚ್ ಮಾಡಿಕೊಳ್ಳಲಾಗುತ್ತದೆ. Maruthi Super Carry, Ashok Leykand Dost, Bolero Pickup
CNG ವಾಹನಗಳಿಗೆ ಆದ್ಯತೆ
8904580031, 8904580032
8904580037 8904580038

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ
ದಾವಣಗೆರೆ ವಿಭಾಗಕ್ಕೆ ಡ್ರೈವರ್ಸ್, ಡೆಲಿವರಿ ಬಾಯ್ಸ್, ಟೆಲಿಕಾಲರ್ಸ್, ಮಾರ್ಕೆಟಿಂಗ್, ಎಕ್ಸಿಕ್ಯೂಟಿವ್ಸ್ ಬೇಕಾಗಿದ್ದಾರೆ.
8904580031, 8904580032
8904580037 8904580038

**ಬೇಕಾಗಿದ್ದಾರೆ**
ನರ್ಸಿಂಗ್ ಕಾಲೇಜಿನಲ್ಲಿ ಕೆಲಸ ಮಾಡಲು ಯಾವುದೇ ಪದವಿ ಆಗಿರುವ ಒಬ್ಬ ಮಹಿಳೆ ಬೇಕಾಗಿದ್ದಾರೆ. ಕೆಲಸದ ಸಮಯ : ಬೆ.10 ರಿಂದ 4 ರವರೆಗೆ.
ಆಸಕ್ತರು ಸಂಪರ್ಕಿಸಿ :
97402 58276

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿರುವ ಗರ್ಭಿಣಿ ಮಹಿಳೆಯನ್ನು ಹಾರೈಕೆ ಮಾಡಲು ಹಾಗೂ ಹೆರಿಗೆಯ ನಂತರ ತಾಯಿ ಮತ್ತು ಮಗುವನ್ನು ಹಾರೈಕೆ ಮಾಡಲು ಸೂಕ್ತ ನುರಿತ ನರ್ಸಿಂಗ್ ಆಗಿರುವ ಮತ್ತು ಅನುಭವ ಇರುವ ನರ್ಸ್ ಬೇಕಾಗಿದ್ದಾರೆ. ಒಳ್ಳೆಯ ಆಕರ್ಷಕ ಸಂಬಳ ನೀಡಲಾಗುತ್ತದೆ. ಸಂಪರ್ಕಿಸಿ.
70224 60467

**ಶಾಕಿರ ಬ್ಯೂಟಿಪಾರ್ಲರ್**
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿಷಿಯನ್ ಮಹಿಳೆ - 3
ಸಹಾಯಕರು ಮಹಿಳೆ - 3
# 741/4, 10th main, P.J. Extension, Davanagere. Contact :
93420 19013

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಓದುಗರ ಗಮನಕ್ಕೆ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ & ರೆಸ್ಟೋರೆಂಟ್, ಹರಿಹರ
● ರೆಸ್ಟೋರೆಂಟ್ ಮ್ಯಾನೇಜರ್
● ಕುಕ್ಸ್
● ಬಿಲ್ಲಿಂಗ್ ಕಂಪ್ಯೂಟರ್ಸ್
● ಸಪ್ಲೈಯರ್ಸ್ ಕ್ಯಾಪ್ಟನ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ
99726 98591
94490 37488

**ಬೇಕಾಗಿದ್ದಾರೆ**
MRP ಲಿಕ್ಕರ್ ಶಾಪ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, ಶಾಮನೂರು ರೋಡ್, ದಾವಣಗೆರೆ.
98861 66432

**ಶಿಕ್ಷಕಿಯರು ಬೇಕಾಗಿದ್ದಾರೆ**
ಜ್ಞಾನದೀಕ್ಷಾ ಸೆಂಟ್ರಲ್ ಸ್ಕೂಲ್, ಬನ್ನಿಕೋಡು,ಹರಿಹರ ತಾ.
NTC or PUC, B.A.,B.Com, B.Sc,B.B.A, Diploma
ಓದಿದವರು ಶಿಕ್ಷಕಿಯಾಗಿ ಕೆಲಸ ಮಾಡಲು ಆಸಕ್ತಿ ಇರುವವರು ಸಂಪರ್ಕಿಸಿ:
80952 62026, 98866 78178

**WANTED TEACHERS**
B.Sc, B.Ed - 3 Posts,
BA, B.Sc, B.Com - 3 Posts,
Nursery Teachers - 2 Posts,
Computer Teacher - I Posts,
Aayas Female - 2.
Contact with Originals
87468 95680, 99801 48289

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ತಕ್ಷಣ ಸೆಕ್ಯೂರಿಟಿ ಗಾರ್ಡ್/ ಸೂಪರ್‌ವೈಸರ್ ಬೇಕಾಗಿದ್ದಾರೆ**
12 ಗಂಟೆ ಡ್ಯೂಟಿ
ವೇತನ : 9000-14000
91130 53483, +91 88678 53961

**IMMEDIATELY REQUIRED**
Computer Teacher for
DRR ENGLISH SCHOOL
P. B.Road Davangere.
9886217745 / 9844007624

**SSLC FAILED BATCHES**
100% Results
ಸಿಂಚನ ಅಕಾಡೆಮಿ ದಾವಣಗೆರೆ.
90195 80600, 88614 45913

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**CHANGE OF NAME**
I, Kashetter Eshwar Sokke @ Kashetter E.S. (New Name) previously called Esawar Kashetter Sokke (old name) S/o S.K.Veerabhadrappa R/o # N-889, Brigade Meadows Plumeria, Kanakapura Main Road, Bangalore South, Bangalore -560082 have changed my name as Kashetter Eshwar Sokke vide affidavit dtd 11-5-2024 sworn before Notary Chetana S.V., Bangalore. Henceforth all my transactions & dealings will be in my new name Kashetter Eshwar Sokke.

**WANTED TEACHERS**
B.Sc,B.E or any degree
(Only Ladies)
Tatva Pre School
Davangere
99641 10736

**TEACHERS WANTED**
Shree Taralabalu Educational Institution (R) Sirigere
Shree Taralabalu Nursery And English Medium Higer Primary School - Basapura
21st Ward, Davanagere -577001
B.Sc, B.Ed - 02, BA, B.Ed - 02 (English Major)
Hindi B.Ed - 01, D.Ed, BA - 02
Contcat : 94488 03836
95912 85527, 81977 96810

**WANTED**
Computer Opareter -01,
Tele Caller -01
Driver 4 Wheels . Ligh.1
Excellent Electronics
2137/14th Main, 3rd Cross. MCC `A' Block . Davangere. 577002.
MOB : 98865 15100

# ಕನ್ನಡ ಸಾಹಿತ್ಯಕ್ಕೆ ವಿಶ್ವ ಗುರುವಿನ ಕೊಡುಗೆ ಅಪಾರ

## ಜಿಲ್ಲಾಡಳಿತದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಶ್ಲಾಘನೆ



ದಾವಣಗೆರೆ, ಮೇ 12 - ಬಸವಣ್ಣನವರು ತಮ್ಮ ವಚನಗಳ ಮೂಲಕ ಸಮಾಜದ ಮೌಢ್ಯತೆ ನಿವಾರಿಸುವ ಜತೆಗೆ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬಸವ ಜಯಂತಿ ಹಾಗೂ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವಗುರು ಹಾಗೂ ಸಾಂಸ್ಕೃತಿಕ ನಾಯಕರಾದ ಬಸವಣ್ಣನವರು ವರ್ಗ ಹಾಗೂ ಜಾತಿ ರಹಿತ ಸಮಾಜ ನಿರ್ಮಿಸುವ ಮೂಲಕ ಸಾಮಾಜಿಕ ಹರಿಕಾರರಾಗಿದ್ದಾರೆ ಎಂದು ಹೇಳಿದರು.

ಅನುಭವ ಮಂಟಪ ಸ್ಥಾಪಿಸಿದ ಬಸವಣ್ಣ, 12ನೇ ಶತ ಮಾನದಲ್ಲೇ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕಲ್ಪನೆಯನ್ನು ಹೊಂದಿದ್ದರು. ಈ ನಿಟ್ಟಿನಲ್ಲಿ ಬಸವಣ್ಣನವರನ್ನು ವಿಶ್ವಗುರು ಹಾಗೂ ಸಾಂಸ್ಕೃತಿಕ ನಾಯಕ ಎಂದು ಕರೆದಿದ್ದಾರೆ ಎಂದರು.

ಹೇಮರೆಡ್ಡಿ ಮಲ್ಲಮ್ಮ ಶಿವನ ಭಕ್ತೆಯಾಗಿ ಬಸವಣ್ಣನವರ ಮಾರ್ಗ ಅನುಸರಿಸಿದ್ದರು. ಮಲ್ಲಮ್ಮರ ಜೀವನ ಎಲ್ಲರಿಗೂ ಸ್ಫೂರ್ತಿ ಮತ್ತು ಮಹಾಸಾಧ್ವಿಯಾಗಿದ್ದರು ಎಂದು ಹೇಳಿದರು.

ಜಿ.ಪಂ. ಸಿಇಓ ಸುರೇಶ್ ಬಿ.ಇಟ್ನಾಳ್, ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ. ಸಂತೋಷ್, ವಿರಕ್ತಮಠದ ಬಸವಪ್ರಭು ಶ್ರೀಗಳು, ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ರುದ್ರಮುನಿ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಹೇಮರೆಡ್ಡಿ ಮಲ್ಲಮ್ಮ ಸಮಾಜದ ಅಧ್ಯಕ್ಷ ಡಾ. ಕೊಟ್ರೇಶ್ ಬಿದ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಳನಾಯ್ಕ್ ಮತ್ತು ಸಮಾಜದ ಮುಖಂಡರು ಇದ್ದರು.

# ಜಿಲ್ಲಾ ಟಾಪರ್ ಗಾನವಿಗೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಂದ ಗೌರವ



ದಾವಣಗೆರೆ, ಮೇ 12 - ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವ ಕು. ಹೆಚ್.ಜಿ. ಗಾನವಿ ಅವರನ್ನು ಅಭಿನಂದಿಸಿರುವ ಬಾಪೂಜಿ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿರುವ ಗಾನವಿ ಅವರ ನಿವಾಸಕ್ಕೆ ಭೇಟಿ ನೀಡಿ, ಸನ್ಮಾನಿಸಿದರಲ್ಲದೇ, ನೆನಪಿನ ಕಾಣಿಕೆ ನೀಡಿ, ಮುಂದಿನ ದಿನಗಳಲ್ಲಿಯೂ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಶಿವ ಸಹಕಾರ ಬ್ಯಾಂಕಿನ ಉಪಾಧ್ಯಕ್ಷ ಚಂದ್ರ ಶೇಖರ್ ಐಗೂರು, ನಿಕಟಪೂರ್ವ ಕಸಾಪ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಗಾನವಿ ಅವರ ತಂದೆ ಗಿರೀಶ್, ತಾಯಿ ಡಿ.ಎಸ್. ಜ್ಯೋತಿ, ಅಜ್ಜಿ ಹಾಗೂ ಕುಟುಂಬದ ಸದಸ್ಯರು ಇತರರು ಉಪಸ್ಥಿತರಿದ್ದರು.

# ಪಾರಂಪರಿಕ ಬೀಜಗಳ ಸಂರಕ್ಷಣೆ, ವಿಸ್ತರಣೆಗೆ ಕೃಷಿ ವಿಜ್ಞಾನ ಕೇಂದ್ರದ ಬೀಜ ಮೇಳದಲ್ಲಿ ಕರೆ




ದಾವಣಗೆರೆ, ಮೇ 12 - ದಾವಣಗೆರೆಯಲ್ಲಿ ಹೆಚ್ಚು ರಸಗೊಬ್ಬರ ಬಳಕೆಯಾಗುತ್ತಿದ್ದು, ಇದು ಅನಾರೋಗ್ಯಕರವಾಗಿದೆ. ರಸಗೊಬ್ಬರದ ಬಳಕೆಯು ಮಣ್ಣಿಗೆ ವಿಷ ಹಾಕಿದಂತೆ ಎಂದು ಬೆಂಗಳೂರಿನ ಸಹಜ ಸಮೃದ್ಧ ಸಂಸ್ಥೆಯ ಕೃಷ್ಣ ಪ್ರಸಾದ್ ಹೇಳಿದರು.

ಬೆಂಗಳೂರಿನ ಕೃಷಿ ತಂತ್ರಜ್ಞಾನಗಳ ಅನ್ವಯಿಕ ಸಂಸ್ಥೆ ಹಾಗೂ ಬೆಂಗಳೂರಿನ ಸಹಜ ಸಮೃದ್ಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಇಂದು ಆಯೋಜಿಸಲಾಗಿದ್ದ ಪಾರಂಪರಿಕ ಬೀಜ ಮೇಳದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಅಂಗಡಿಯಲ್ಲಿ ಬಿತ್ತನೆ ಬೀಜಗಳನ್ನು ತಂದರೆ ಒಳ್ಳೆಯದು ಎಂಬುದು ಬರೀ ಭ್ರಮೆ. ಪಾರಂಪರಿಕ ಬೀಜಗಳಲ್ಲಿ ಹೆಚ್ಚು ಉಪಯುಕ್ತತೆ ಇದೆ ಎಂದು ಹೇಳಿದರು.

ತಮಿಳುನಾಡಿನ ವೆಲ್ಲೂರಿನಲ್ಲಿ ಪಾರಂಪರಿಕ ಬೀಜಗಳ ಬಳಕೆಯಿಂದ ಕ್ರಾಂತಿಯೇ ಆಗಿದೆ. ದಾವಣಗೆರೆಯಲ್ಲೂ ಈ ಕಾರ್ಯಕ್ರಮದ ಮೂಲಕ ಅದೇ ರೀತಿಯ ಕ್ರಾಂತಿಗೆ ದಾರಿಯಾಗಲಿ ಎಂದು ಆಶಿಸಿದರು.

ಭಾರತ್ ಬೀಜ್ ಸ್ವರಾಜ್ ಮಂಚ್ ರಾಷ್ಟ್ರೀಯ ಸಂಚಾಲಕರಾದ ಛತ್ತೀಸ್‌ಘಡದ ಜಾಕೋಬ್ ನೆಲ್ಲಿ ತಾನಂ ಮಾತನಾಡಿ, ಪಾರಂಪರಿಕ ಬೀಜಗಳೆಂದರೆ ಸಂಪ್ರದಾಯದಂತೆ ಸ್ಥಿರವಾಗಿರುತ್ತವೆ ಎಂದು ಭಾವಿಸುವುದು ತಪ್ಪು. ಈ ಬೀಜಗಳು ಪರಿವರ್ತನೆ ಹೊಂದುತ್ತಿರುತ್ತವೆ. ಉತ್ತಮ ಇಳುವರಿ ನೀಡುವ ಹೆಚ್.ಎಂ.ಟಿ. ಭತ್ತ ಇದಕ್ಕೊಂದು ಉದಾಹರಣೆ ಎಂದರು.

ಪಾರಂಪರಿಕ ಬಿತ್ತನೆ ಬೀಜಗಳಲ್ಲಿನ ವೈವಿಧ್ಯತೆಗಳನ್ನು ಹಂಚಿಕೊಂಡು ಉಳಿಸುವ ಜೊತೆಗೆ ಇನ್ನಷ್ಟು ವಿಸ್ತರಿಸಬೇಕಿದೆ ಎಂದೂ ಅವರು ಹೇಳಿದರು.

ಪಾರಂಪರಿಕ ಬೀಜಗಳಿಗೆ ಅಂತರರಾಷ್ಟ್ರೀಯ ಕಾನೂನುಗಳು, ಹಕ್ಕುಸ್ವಾಮ್ಯ ಕಾಯ್ದೆಗಳು ಸೇರಿದಂತೆ ಹಲವು ಸವಾಲುಗಳಿವೆ. ಸಾರ್ವಜನಿಕರ ಹಣದಿಂದ ಕಾರ್ಯನಿರ್ವಹಿಸುವ ವಿಶ್ವವಿದ್ಯಾಲಯಗಳೂ ಸಹ ಬೀಜಗಳ ಮೇಲೆ ಹಕ್ಕು ಸ್ವಾಮ್ಯ ಹೊಂದಲು ಮುಂದಾಗುತ್ತಿರುವುದು ವಿಷಾದಕರ ಎಂದವರು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೈಸೂರಿನ ಬೀಜ ಸಂರಕ್ಷಕಿ ಪದ್ಮಾವತಮ್ಮ, ಸಿದ್ಧ ಬೀಜಗಳೇ ಬೇಕು ಎಂಬ ಮನೋಭಾವದಿಂದ ಹೊರ ಬರಬೇಕು. ಮುಂದಿನ ಪೀಳಿಗೆಗೆ ಒಳ್ಳೆಯ ಫಲವತ್ತಾದ ಭೂಮಿ ಬಿಟ್ಟು ಹೋಗಬೇಕು ಎಂದರೆ ಪಾರಂಪರಿಕ ಕೃಷಿ ಪದ್ಧತಿಗಳನ್ನು ಉಳಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಏಕಾಂತಿಕ ಸಂಸ್ಥೆಯ ರಾಘವ ಪ್ರಾಸ್ತಾವಿಕವಾಗಿ ಮಾತನಾಡಿ, ಪಾರಂಪರಿಕ ಬಿತ್ತನೆ ಬೀಜ ಬಳಸಿದರೆ ಕೃಷಿಕರು ಹಾಗೂ ಕೈತೋಟ ನಿರ್ವಹಿಸುವವರಿಗೆ ಅರ್ಧ ಕೆಲಸ ಕಡಿಮೆಯಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಐಸಿಎಆರ್ - ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಅಧ್ಯಕ್ಷ ಟಿ.ಎನ್. ದೇವರಾಜ ಮಾತನಾಡಿ, ಪಾರಂಪರಿಕ ಬೀಜಗಳಿಂದ ಆದಾಯ, ಆರೋಗ್ಯ ಹಾಗೂ ಆನಂದ ಸಾಧ್ಯ. ಮಧ್ಯ ಕರ್ನಾಟಕದಿಂದ ಆರಂಭವಾಗಿರುವ ಈ ಅಭಿಯಾನ ಮುಂದಿನ ದಿನಗಳಲ್ಲಿ ಕರ್ನಾಟದಾದ್ಯಂತ ಹರಡಲಿ ಎಂದು ಆಶಿಸಿದರು.

ವೇದಿಕೆಯ ಮೇಲೆ ಬೆಂಗಳೂರಿನ ಕೈತೋಟ ಪರಿಣಿತ ರಾಜೇಂದ್ರ ಹೆಗಡೆ ಉಪಸ್ಥಿತರಿದ್ದರು.

ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞ ಎಂ.ಜಿ. ಬಸವನಗೌಡ ಸ್ವಾಗತಿಸಿದರು. ಟಿ.ಜಿ. ಅವಿನಾಶ್ ನಿರೂಪಿಸಿದರೆ, ಜಬಿವುಲ್ಲಾ ವಂದಿಸಿದರು.

# ಕಟ್ಟ ಕಡೆಯ ಮನುಷ್ಯನನ್ನು ಗುರುತಿಸಿದವರು ಬಸವಣ್ಣನವರು



**ಜಿಲ್ಲಾ ಕಾಂಗ್ರೆಸ್ ವತಿಯಿಂದ ಬಸವ ಜಯಂತಿ ಕಾರ್ಯಕ್ರಮದಲ್ಲಿ ದಿನೇಶ್ ಕೆ.ಶೆಟ್ಟಿ**

ದಾವಣಗೆರೆ, ಮೇ 12 - ಜಿಲ್ಲಾ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಕಛೇರಿಯಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಈ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು, 12ನೇ ಶತಮಾನದಲ್ಲೇ ಸಮಾಜದ ಕಟ್ಟಕಡೆಯ ಮನುಷ್ಯನನ್ನು ಗುರುತಿಸಿದವರು ಬಸವಣ್ಣನವರು ಎಂದು ತಿಳಿಸಿದರು.

'ಜಾತಿ ಸಂಕರವಾದ ಬಳಿಕ ಕುಲವನರಸುವರೇ ?' ಎಂದು ಪ್ರಶ್ನಿಸಿ ಕಾಯಕಜೀವಿಗಳ ಕೇಂದ್ರಿತ ಶರಣ ಸಂಕುಲವನ್ನು ಸೃಷ್ಟಿಸಿದರು. ವಿವಿಧ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಪಂಚಮರಿಗೆ ಮೊದಲ ಬಾರಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು. ಅವರೆಲ್ಲ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು ಎಂದರು.

ಮಹಿಳಾ ಕಾಂಗ್ರೆಸ್‌ನ ಶ್ರೀಮತಿ ರಾಜೇಶ್ವರಿ ಮಾತನಾಡಿ, ಭಾರತದಲ್ಲಿ ವಿವಿಧ ಜಾತಿಗಳ ಕಾಯಕ ಜೀವಿಗಳು ಮೊದಲ ಬಾರಿಗೆ ಜಾತಿಯನ್ನು ಮೀರಿ ಒಂದು ವರ್ಗವಾಗಿದ್ದು, ಶರಣ ಸಂಕುಲದಲ್ಲಿ ಎಂಬುದು ಹೆಮ್ಮೆಯ ವಿಚಾರವಾಗಿದೆ ಎಂದರು.

ತಮ್ಮ ಕಾಯಕಗಳ ಹೆಸರುಗಳನ್ನು ಅಭಿಮಾನದಿಂದ ಉಳಿಸಿಕೊಂಡರು. ಆದರೆ ಆ ಕಾಯಕಗಳ ಒಳಗೆ ಇದ್ದ ಜಾತಿ ವಿಷವನ್ನು ಹೊರ ಹಾಕಿದರು. ಹೀಗೆ ಶರಣರಲ್ಲಿ ಸಮಗಾರ, ಮಾದಾರ, ಮೇದಾರ, ಡೋಹರ, ಅಂಬಿಗ ಮುಂತಾದ ಪದಗಳು ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾಗಿ ಉಳಿದವು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀಮತಿ ಗೀತಾ ಚಂದ್ರಶೇಖರ್, ದ್ರಾಕ್ಷಾಯಣಮ್ಮ, ಸುನೀತಾ ಭೀಮಣ್ಣ, ಕಾವ್ಯ, ವನಜಾ, ಮತ್ತಿತರರಿದ್ದರು.

# ಅದ್ಧೂರಿಯಾಗಿ ಜರುಗಿದ ಶ್ರೀ ಮರುಳಸಿದ್ಧೇಶ್ವರ ಜಾತ್ರೆ

ಕೊಟ್ಟೂರು, ಮೇ 12 - ಪಂಚಪೀಠಗಳಲ್ಲಿ ಒಂದಾಗಿರುವ ನಾಡಿನ ಪ್ರಸಿದ್ಧ ಉಜ್ಜಯಿನಿ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ರಥೋತ್ಸವ ಸಹಸ್ರಾರು ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಭಾನುವಾರ ಅದ್ಧೂರಿಯಾಗಿ ನಡೆಯಿತು.

ಸ್ವಾಮಿಯ ಪಟಾಕ್ಷಿಯನ್ನು 2.01 ಲಕ್ಷ ರೂ.ಗೆ ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ ಪ್ರವೀಣ್ ಸವಾಲ್‌ನಲ್ಲಿ ಪಡೆದುಕೊಂಡರು. ಪಟಾಕ್ಷಿ ಸವಾಲು ಮುಗಿಯುತ್ತಿದ್ದಂತೆ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮಳೆ- ಬೆಳೆ ಸಮೃದ್ಧವಾಗಿ ರೈತರು ಬದುಕು ಹಸನಾಗಲಿ. ನಾಡಿನ ಭಕ್ತರಿಗೆ ಮರುಳಸಿದ್ಧೇಶ್ವರ ಸ್ವಾಮಿ ಸರ್ವವನ್ನು ಕಲ್ಪಿಸಿ ಸನ್ಮಂಗಲವನ್ನುಂಟು ಮಾಡಲಿ ಎಂದು ಆಶೀರ್ವಚನ ನೀಡಿದರು. ನಂತರ ವೈಭವದ ರಥೋತ್ಸವಕ್ಕೆ ಸಂಜೆ 6 ಗಂಟೆಗೆ ಚಾಲನೆ ನೀಡಿದರು.

ಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ ಭಕ್ತರು ಹರ್ಷೋದ್ಘಾರದಿಂದ ಜಯಘೋಷ ಕೂಗುತ್ತಾ ರಥವನ್ನು ಪಾದಗಟ್ಟೆಯವರೆಗೆ ಎಳೆದೊ ಯ್ದರು. ಮತ್ತೆ ಮರಳಿ ಮೂಲಸ್ಥಾನಕ್ಕೆ ಎಳೆತೆಂದು ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿದರು. ನಂತರ ಶ್ರೀ ಮಠಕ್ಕೆ ತಂದು ಮಠದಲ್ಲಿ ಪ್ರತಿಷ್ಠಾಪಿಸಿ ಮೂರ್ತಿಗೆ ಮಂಗಳಾರತಿ ಬೆಳಗಿ ಉತ್ಸವದ ಸಂಭ್ರಮಕ್ಕೆ ವಿರಾಮ ನೀಡಲಾಯಿತು.

ನಾಡಿನ ಮೂಲೆ ಮೂಲೆಗಳಿಂದ ಬಂದಿದ್ದ ಲಕ್ಷಾಂತರ ಭಕ್ತರು ರಥೋತ್ಸವದಲ್ಲಿ ಭಾಗಿಯಾಗಿ ಧನ್ಯತೆ ಪಡೆದರು. ಶ್ರೀ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ರಥೋತ್ಸವದ ಕಾರ್ಯಕ್ರಮದಲ್ಲಿ ಮೊದಲು ಕೊಟ್ಟೂರಿನಲ್ಲಿ ಜರುಗಿದ ನಾಡಿನ ಪ್ರಸಿದ್ಧ ಉಜ್ಜಯಿನಿ ಶ್ರೀ ಜಗದ್ಗುರು ಮರುಳಸಿದ್ಧೇಶ್ವರ ಸ್ವಾಮಿ ರಥೋತ್ಸವ ಸ್ವಾಮಿಯ ಉತ್ಸವ ಮೂರ್ತಿಯನ್ನು ಕರೆತಂದು ರಥಕ್ಕೆ ಪ್ರದಕ್ಷಿಣೆ ಹಾಕಿಸಿ ರಥದಲ್ಲಿ ಪ್ರತಿಷ್ಠಾನ ಮಾಡಲಾಯಿತು. ಸಮಾಳ, ನಂದಿಕೋಲು ಸೇರಿದಂತೆ ವಿವಿಧ ವಾದ್ಯಗಳೊಂದಿಗೆ ನೆರೆದಿದ್ದ ಲಕ್ಷಾಂತರ ಭಕ್ತರು ಜಯಘೋಷಣೆ ಕೂಗುತ್ತಾ ರಥವನ್ನು ಮುಂದೆ ಎಳೆದುಕೊಂಡು ಹೋದರು. ನಂತರ ಪಾದಗಟ್ಟೆ ಮುಟ್ಟಿ ಸ್ವಾಮಿಯ ಪೂಜೆ ಸಲ್ಲಿಸಿ ಮತ್ತೆ ಮರಳಿ ಬಂದು ನೆಲೆ ನಿಲ್ಲಿಸಲಾಯಿತು.

ರಥೋತ್ಸವಕ್ಕೆ ಬಂದ ಭಕ್ತರಿಗೆ ಶ್ರೀ ಪೀಠದ ಪ್ರೌಢ ಶಾಲಾ ಆವರಣದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಗ್ರಾಮದ ವಿವಿಧೆಡೆ ಕುಡಿಯುವ ನೀರಿಗಾಗಿ ನಳಗಳನ್ನು ಅಳವಡಿಸಲಾಗಿದೆ. ಭಾನುವಾರ ನಡೆದ ರಥೋತ್ಸವದ ರಥಕ್ಕೆ ಬಣ್ಣ ಬಣ್ಣದ ಬಟ್ಟೆ, ಪಟಗಳನ್ನು ಹಚ್ಚುವ ಮೂಲಕ ಮೆರುಗು ಕಂಡುಬಂದಿತ್ತು ಉಜ್ಜಿನಿ ಶ್ರೀ ಜಗದ್ಗುರು ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವಕ್ಕೆ ಬರುವ ಭಕ್ತರಿಗಾಗಿ ಪ್ರಸಾದ ವ್ಯವಸ್ಥೆ ಮತ್ತು ಶಾಮಿಯಾನ ವ್ಯವಸ್ಥೆ ಕಲ್ಪಿಸಲಾಗಿತ್ತು.

## ಎಂ.ಇ.ಎಸ್‌ಗೆ 2 ಉನ್ನತ, 14 ಪ್ರಥಮ ಶ್ರೇಣಿ

ದಾವಣಗೆರೆ, ಮೇ 12- ಇಲ್ಲಿನ ಆಂಜನೇಯ ಬಡಾವಣೆಯ ಎಂ.ಇ.ಎಸ್ ಕಾನ್ವೆಂಟ್ ಶಾಲೆಯು 2023-24ನೇ ಶೈಕ್ಷಣಿಕ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಗಳಿಸಿದ್ದಾರೆ. ಶಾಲೆಯ ಇಬ್ಬರು ವಿದ್ಯಾರ್ಥಿಗಳು ಉನ್ನತ ಶ್ರೇಣಿ ಮತ್ತು 14 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

## ಗಾನ್ನವಿ ನಿವಾಸಕ್ಕೆ ಗಾಯತ್ರಿ ಸಿದ್ದೇಶ್ವರ ಭೇಟಿ



ದಾವಣಗೆರೆ, ಮೇ 12 - ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಶಾಮನೂರಿನ ಎಚ್.ಜಿ.ಗಾನ್ನವಿ ನಿವಾಸಕ್ಕೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಭೇಟಿ ನೀಡಿ ಸನ್ಮಾನಿಸಿದರು. ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆ ಮಾಡುವಂತೆ ಶುಭ ಹಾರೈಸಿದರು.

ಈ ವೇಳೆ ಪಾಲಕರಾದ ಎಚ್.ಎನ್.ಗಿರೀಶ್, ಜ್ಯೋತಿ, ಬಿಜೆಪಿ ಮುಖಂಡರಾದ ಸಂಕೋಳ್ ಚಂದ್ರಶೇಖರ್, ಗ್ಯಾರಳ್ಳಿ ಶಿವು, ರಾಜು ಮತ್ತು ಕುಟುಂಬಸ್ಥರು ಇದ್ದರು.

## ಓದುಗರ ಪತ್ರ

### ರಸ್ತೆ ಆಕ್ರಮಿಸಿರುವ ಮರ ಕೊಂಬೆಗಳು



**ಮಾನ್ಯರೇ,**

ಸಿದ್ದವೀರಪ್ಪ ಬಡಾವಣೆ ನಾಗರಿಕ ಹಿತರಕ್ಷಣಾ ಸಂಘಟನೆ ಹಾಗೂ ಪರಿಸರ ಪ್ರೇಮಿಗಳು ಇಲ್ಲಿ ಗಿಡ ನೆಟ್ಟು ನೀರೆರೆದು, ಮರಗಳನ್ನು ಬೆಳೆಸಿರುವುದು ಸ್ವಾಗತಾರ್ಹ. ಅವುಗಳಲ್ಲಿ ಕೆಲವು ದಟ್ಟವಾಗಿ ಬೆಳೆದು ರೆಂಬೆ- ಕೊಂಬೆಗಳು ಓಡಾಡುವ ರಸ್ತೆ ಹಾಗೂ ಪಾದಚಾರಿ ರಸ್ತೆ ಆಕ್ರಮಿಸಿಕೊಂಡಿರುವುದರಿಂದ ಜನರ ಓಡಾಟಕ್ಕೆ ಅನಾನುಕೂಲವಾಗಿದೆ.

ಬಿ.ಐ.ಇ.ಟಿ ರಸ್ತೆಯಿಂದ ಶಾಮನೂರಿಗೆ ಹೋಗಲು ಸಿದ್ದವೀರಪ್ಪ ಬಡಾವಣೆ 1 ರಿಂದ 14ನೇ ಅಡ್ಡ ರಸ್ತೆಯಲ್ಲಿ ಹಂಪ್ಸ್‌ಗಳಿಲ್ಲದ ಕಾರಣ ಆಟೋ, ದ್ವಿಚಕ್ರ ಹಾಗೂ ಕಾರುಗಳ ಅತ್ಯಂತ ವೇಗವಾಗಿ ಓಡಾಡುತ್ತವೆ. ಹೀಗಾಗಿ, ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು ಇಲ್ಲಿನ ರಸ್ತೆಗಳನ್ನು ದಾಟಿ ಹೋಗಲು ಭಯಪಡುತ್ತಾರೆ. ಇದಕ್ಕೆ ಕಾರಣ ಅಡ್ಡಾದಿಡ್ಡಿ ಬೆಳೆದಿರುವ ಮರಗಿಡಗಳ ಕೊಂಬೆಗಳು. ಅವುಗಳನ್ನು ನೆಲದಡಿಯಿಂದ ಎಳೆಂಟು ಅಡಿ ಎತ್ತರದವರೆಗೆ ಕತ್ತರಿಸುವುದರಿಂದ ರಸ್ತೆಯಲ್ಲಿ ಆ ತುದಿಯಿಂದ ಈ ತುದಿಯವರೆಗೆ ಜನರ ಕಣ್ಣಿಗೆ ಬರುವ ವಾಹನಗಳು ಕಾಣುವಂತಾದರೆ, ರಸ್ತೆ ದಾಟುವಾಗ ಆ ಕಡೆ, ಈ ಕಡೆ ನೋಡುತ್ತಾ ಜಾಗ್ರತೆಯಿಂದ ಹೋಗಲು ಸಹಾಯಕವಾಗುತ್ತವೆ. ಸಂಬಂಧಪಟ್ಟ ಇಲಾಖೆಯವರು ಇದನ್ನು ಗಮನಿಸಬೇಕಾಗಿದೆ.

**ಎಂ.ವಿ.ವೆಂಕಟೇಶ್**, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.

### ಹೆಲ್ಮೆಟ್ ಕಡ್ಡಾಯ ನಿಯಮ ಸಡಿಲಗೊಳಿಸಿ

**ಮಾನ್ಯರೇ,**

ಬಿಸಿಲಿನ ತಾಪಮಾನವು ಕಲ್ಯಾಣ ಕರ್ನಾಟಕದಂತೆ ದಾವಣಗೆರೆ ಜಿಲ್ಲೆಯಲ್ಲೂ ಹೆಚ್ಚು ಕಡಿಮೆ 40 ಡಿಗ್ರಿ ವರೆಗೆ ಕಳೆದ ಒಂದು ತಿಂಗಳಿಂದಲೂ ಇರುತ್ತದೆ. ಇದರಿಂದ ಜನ ಕಂಗಾಲಾ ಗಿದ್ದಾರೆ.

ಅದರಲ್ಲೂ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುವುದರಿಂದ ಅವರ ಕೂದಲು ಉದುರುವುದು ಮತ್ತು ಚರ್ಮ ಕಾಯಿಲೆಗೆ ತುತ್ತಾಗುವುದು ಕಂಡುಬರುತ್ತದೆ ಇದನ್ನು ಸ್ವಲ್ಪ ಮಟ್ಟಿಗಾದರೂ ತಪ್ಪಿಸಲು ಮುಂಗಾರು ಆರಂಭವಾಗುವವರೆಗೆ ಕಡ್ಡಾಯ ಹೆಲ್ಮೆಟ್ ಧರಿಸುವುದರಿಂದ ವಿನಾಯ್ತಿ ನೀಡಲು ಸಂಬಂಧಪಟ್ಟ ಇಲಾಖೆಯವರು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

- **ಎಸ್. ಹಾಲೇಶಪ್ಪ**, ನಿ.ಪೂ. ಜಿಲ್ಲಾಧ್ಯಕ್ಷ ಸ ನೌ ಸಂಘ, ದಾವಣಗೆರೆ.

# ಕುರುಹಿನಶೆಟ್ಟಿ ಸಮಾಜದ ಏಳಿಗೆಗೆ ಶ್ರಮಿಸಿದ್ದ ತಿಪ್ಪೇಸ್ವಾಮಿ



ದಾವಣಗೆರೆ ನಗರಸಭೆಯಲ್ಲಿ ಸುದೀರ್ಘ ಕಾಲ ಗುಮಾಸ್ತರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ತಿಪ್ಪೇಸ್ವಾಮಿ ಅವರು ನೌಕರರ ಸಂಘಟನೆ ಮೂಲಕ ನೌಕರರ ನ್ಯಾಯಯುತ ಬೇಡಿಕೆಗಳಿಗೆ ಹೋರಾಟ ಮಾಡಿದ್ದರು.

ಜೊತೆಗೆ, ಅತ್ಯಂತ ಹಿಂದುಳಿದ ಕುರುಹಿನಶೆಟ್ಟಿ ಸಮಾಜದ ಏಳಿಗೆಗೆ ಅಪಾರವಾಗಿ ಶ್ರಮಿಸಿದ್ದರು. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ತಿಪ್ಪೇಸ್ವಾಮಿ, 2024, ಮೇ 1ರ ಕಾರ್ಮಿಕ ದಿನಾಚರಣೆಯಂದೇ ನಿಧನರಾದರು.

ನಗರಸಭೆಯಲ್ಲಿ ದಿನಗೂಲಿಯಾಗಿ ಸೇವೆ ಸಲ್ಲಿಸುತ್ತಿದ್ದ ತಿಪ್ಪೇಸ್ವಾಮಿ ಅವರು, ಸುದೀರ್ಘ ಹೋರಾಟದ ಫಲವಾಗಿ ಖಾಯಂ ನೌಕರರಾಗಿ 1994ರಲ್ಲಿ ಸಕ್ರಮಗೊಂಡು, 21 ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿ ಸಿಬ್ಬಂದಿ ಸಹಾಯಕರಾಗಿ ಸೇವೆ ಸಲ್ಲಿಸಿ, 2015ರಲ್ಲಿ ವಯೋನಿವೃತ್ತಿ ಹೊಂದಿದ್ದರು. ಎಲ್ಲಾ ನೌಕರರ ಅಚ್ಚುಮೆಚ್ಚಿನ ಗುಮಾಸ್ತರಾಗಿದ್ದರು. ನಿವೃತ್ತ ನೌಕರರ ಸಂಘಟನೆಯ ಖಜಾಂಚಿಯಾಗಿದ್ದ ಅವರು, ನಿವೃತ್ತ ನೌಕರರಿಗೆ ಸರ್ಕಾರದಿಂದ ಸಿಗಬೇಕಾದ ಎಲ್ಲಾ ಸೌವಲತ್ತುಗಳನ್ನು ಕೊಡಿಸುವ ಪ್ರಯತ್ನದಲ್ಲಿದ್ದರು. ಎಂ.ಸಿ.ಸಿ 'ಬಿ' ಬ್ಲಾಕ್‌ನಲ್ಲಿರುವ ಕುರುಹಿನಶೆಟ್ಟಿ ಸಮಾಜದ ವಿದ್ಯಾರ್ಥಿ ನಿಲಯ ಮತ್ತು ಕೆ.ಟಿ.ಜೆ ನಗರ 14ನೇ ಕ್ರಾಸ್‌ನಲ್ಲಿರುವ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಸಹಕಾರ ನೀಡುತ್ತಾ 50 ವರ್ಷಗಳಿಂದ ನಿರಂತರವಾಗಿ ದೇವಸ್ಥಾನ ಸಮಿತಿಯ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಕುರುಹಿನಶೆಟ್ಟಿ ಸಮಾಜದ ಬಂಧುಗಳ ಸಹಕಾರದಿಂದ ಸಮುದಾಯ ಭವನವನ್ನು ನಿರ್ಮಿಸುವಲ್ಲೂ ಅವರು ಶ್ರಮಿಸಿದ್ದರು.

- **ರುದ್ರಮುನೇಶ್ವರ**, ದಾವಣಗೆರೆ.

## ಪ್ರಥಮ ಪದವಿಗೆ ಪ್ರವೇಶ ಆರಂಭ

ದಾವಣಗೆರೆ, ಮೇ 12 - ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ವರ್ಷದ ಬಿಎ, ಬಿಕಾಂ, ಬಿಬಿಎ, ಬಿಎಸ್ಸಿ ಪದವಿಗಳಿಗೆ ಅರ್ಜಿ ಗಳನ್ನು ಆಹ್ವಾನಿಸಲಾಗಿದೆ. ದ್ವಿತೀಯ ಪಿಯುಸಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಕಾಲೇಜಿಗೆ ಭೇಟಿ ನೀಡಿ ಅರ್ಜಿಗಳನ್ನು ಪಡೆದುಕೊಳ್ಳಬಹುದು ಎಂದು ಪ್ರಾಂಶುಪಾಲರಾದ ಪ್ರೊ ದಾದಾಪೀರ್ ನವಿಲೇಹಾಳ್ ತಿಳಿಸಿದ್ದಾರೆ.

# ಕಡಿಮೆ ಖರ್ಚಿನಲ್ಲಿ ಸಂಗಾತಿ ಹುಡುಕಲು ವಧು-ವರರ ಸಮಾವೇಶ ಉಪಯುಕ್ತ




**'ಛಲವಾದಿ ವಧು-ವರರ ಸಮಾವೇಶ'ದಲ್ಲಿ ಎನ್. ರುದ್ರಮುನಿ**

ದಾವಣಗೆರೆ, ಮೇ 12- ಛಲವಾದಿ ಮಹಾಸಭಾ ವತಿಯಿಂದ ಭಾನುವಾರ ನಗರದ ಭಗೀರಥ ವೃತ್ತದಲ್ಲಿರುವ ಹೆಚ್. ಬಿ. ಇಂದಿರಮ್ಮ ರಾಮಯ್ಯ ಫಂಕ್ಷನ್ ಹಾಲ್‌ನಲ್ಲಿ ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ 'ಛಲವಾದಿ ವಧು-ವರರ ಸಮಾವೇಶ' ಹಮ್ಮಿಕೊಳ್ಳಲಾಗಿತ್ತು.

ಜಿಲ್ಲೆ ಸೇರಿದಂತೆ ವಿವಿಧ ಭಾಗಗಳಿಂದ ಸಮಾಜ ಬಾಂಧವರು ಆಗಮಿಸಿದ್ದರು. ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ನಡೆದ ಈ ಸಮಾವೇಶದಲ್ಲಿ 103 ಹೆಸರುಗಳನ್ನು ನೋಂದಾಯಿಸಿಕೊಂಡಿದ್ದರು. ಅಂತಿಮವಾಗಿ 52 ಜೋಡಿಗಳು ವಿವಾಹಕ್ಕೆ ಸಮ್ಮತಿ ಸೂಚಿಸಿದವು.

ಸಮಾವೇಶ ಉದ್ಘಾಟನೆ ವೇಳೆ ಮಾತನಾಡಿದ ಛಲವಾದಿ ಮಹಾಸಭಾ ಅಧ್ಯಕ್ಷ ಎನ್. ರುದ್ರಮುನಿ, ಸಮಾಜದಲ್ಲಿ ಕಡು ಬಡವರಿದ್ದಾರೆ. ವಧು-ವರರನ್ನು ಹುಡುಕಲು ಮಧ್ಯವರ್ತಿಗಳಿಗೆ ಹಣ ನೀಡಲು ಅವರಿಗೆ ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂತಹ ಸಮಾವೇಶಗಳು ಉಪಯುಕ್ತವಾಗಿವೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಹಿಂದೇಟು ಹಾಕಲಾಗುತ್ತದೆ. ಈ ರೀತಿ ಮಾಡದೆ, ಕೃಷಿಕ ಮಕ್ಕಳಿಗೆ ಹೆಣ್ಣು ಕೊಟ್ಟು ಸಂಬಂಧ ಬೆಳೆಸುವಂತೆ ಕರೆ ನೀಡಿದರು. ಈ ಸಮಾವೇಶ ಸಮಾಜದವರು ಒಂದೆಡೆ ಬೆರೆತು ಸಂಘಟಿತರಾಗಲೂ ಸಹಕಾರಿಯಾಗುತ್ತದೆ ಎಂದರು.

ಸಮಾಜದ ಮುಖಂಡರುಗಳಾದ ನಿವೃತ್ತ ಇಂಜಿನಿಯರ್ ಜಯಪ್ರಕಾಶ್, ನಿವೃತ್ತ ಕಮೀಷನರ್ ಬಿ.ಹೆಚ್. ಶೇಖರಪ್ಪ, ಛಲವಾದಿ ಮಹಾಸಭಾ ಮುಖಂಡ ಹೆಚ್.ಕೆ. ಬಸವರಾಜ್, ನಿವೃತ್ತ ಡಿಹೆಚ್‌ಓ ಡಾ. ಜಗನ್ನಾಥ್, ರಾಮಯ್ಯ, ಸಮಾವೇಶದ ಸಂಚಾಲಕ ಎಲ್. ಪಂಚಾಕ್ಷರಯ್ಯ ಇತರರು ಈ ಸಂದರ್ಭದಲ್ಲಿದ್ದರು.


**ನೀವೆಲ್ಲರೂ ಗಮನಿಸಲೇಬೇಕಾದ ಸುದ್ದಿ ಇದು!**

ದಾವಣಗೆರೆಯಿಂದ ಪ್ರಕಟವಾಗುತ್ತಿದ್ದು, ಐದಾರು ಜಿಲ್ಲೆಗಳಾದ್ಯಂತ ಪ್ರಸಾರವನ್ನು ಹೊಂದಿರುವ ಬೆಳಗಿನ ದಿನಪತ್ರಿಕೆ

ಸಮಾಚಾರ

ಇದೀಗ ನಿತ್ಯವೂ 6 ಪುಟಗಳೊಂದಿಗೆ ಪ್ರಕಟವಾಗುತ್ತಿದೆ. ಏಜೆನ್ಸಿ ಇಲ್ಲದ ಕಡೆ ಆಸಕ್ತರು ಸಂಪರ್ಕಿಸಬಹುದಾಗಿದೆ.

ಮೊ. 9740112249, 9606568950, 9740249346

**ಸಿದ್ದವ್ವನಹಳ್ಳಿ ಓಬನಾಯಕ ಚಾರಿಟಬಲ್ ಟ್ರಸ್ಟ್ (ರಿ.) ಬುಳ್ಳಾಪುರ**

ಕನ್ನಡ ಮಾಧ್ಯಮ ವಸತಿ ಪ್ರೌಢಶಾಲೆ, ಹೊಸ ಬುಳ್ಳಾಪುರ, ಆನಗೋಡು (ಅ), ದಾವಣಗೆರೆ (ತಾ) (ಜಿ) 577 556

**ಶಿಕ್ಷಕರು ಬೇಕಾಗಿದ್ದಾರೆ**

| Subjects | Posts | Qualification |
|---|---|---|
| ಕನ್ನಡ | 01 | B.A., B.Ed., |
| ಇಂಗ್ಲೀಷ್ | 01 | B.A., B.Ed., |
| ಹಿಂದಿ | 01 | B.A., B.Ed., (Hindi) |
| ಗಣಿತ | 01 | B.Sc., B.Ed., |
| ವಿಜ್ಞಾನ | 01 | B.Sc., B.Ed., |
| ಸಮಾಜ ವಿಜ್ಞಾನ | 01 | B.A., B.Ed., |
| ದೈಹಿಕ ಶಿಕ್ಷಣ | 01 | BP.Ed. |

ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಸ್ವ-ವಿವರ, ಭಾವಚಿತ್ರ ಮತ್ತು ದಾಖಲೆಗಳೊಂದಿಗೆ ಈ ಕೆಳಕಂಡ ವಿಳಾಸವನ್ನು ಸಂಪರ್ಕಿಸಬಹುದು.

ಸಂದರ್ಶನಕ್ಕಾಗಿ ಈ ಕೆಳಕಂಡ ವಿಳಾಸ ಹಾಗೂ ದೂರವಾಣಿಯನ್ನು ಸಂಪರ್ಕಿಸಬಹುದು.

ವಿಳಾಸ : ಮುಖ್ಯೋಪಾಧ್ಯಾಯರು, S.O.C.T. ಕನ್ನಡ ಮಾಧ್ಯಮ ವಸತಿ ಪ್ರೌಢಶಾಲೆ, ಹೊಸಬುಳ್ಳಾಪುರ, ಆನಗೋಡು (ಪೋ) ದಾವಣಗೆರೆ (ತಾ.) (ಜಿ.) - 577 556. ಮೊ : 89711 84427, 99009 80190



**ಉಜ್ಜಿನಿ ಮರಳಸಿದ್ದೇಶ್ವರ ರಥೋತ್ಸವ** ವಿಜಯನಗರ ಜಿಲ್ಲೆ ಉಜ್ಜಿನಿ ಶ್ರೀ ಮರಳಸಿದ್ದೇಶ್ವರ ರಥೋತ್ಸವವು ಭಾನುವಾರ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

## ಸಿರಿಗೆರೆಯ ಸದ್ಧರ್ಮ ನ್ಯಾಯಪೀಠಕ್ಕೆ ಬಿಡುವು



ಸಿರಿಗೆರೆಯ ತರಳಬಾಳು ಬೃಹನ್ಮಠದಲ್ಲಿ ಇಂದು ಮತ್ತು ಇದೇ ದಿನಾಂಕ 20ರ ಸೋಮವಾರ ನಡೆಯಬೇಕಿದ್ದ ಸದ್ಧರ್ಮ ನ್ಯಾಯಪೀಠದ ಕಾರ್ಯ ಕಲಾಪಗಳನ್ನು ಮುಂದೂಡಲಾಗಿದೆ. ಮಸ್ಕತ್ ಮತ್ತು ದುಬೈಗಳಲ್ಲಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮಗಳಲ್ಲಿ ಜಗದ್ಗುರು ಡಾ॥ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಪಾಲ್ಗೊಳ್ಳುವ ನಿಟ್ಟಿನಲ್ಲಿ ಪ್ರವಾಸ ಕೈಗೊಂಡಿರುವ ಕಾರಣ, ನ್ಯಾಯಪೀಠದ ಕಾರ್ಯ ಕಲಾಪಗಳು ನಡೆಯುವುದಿಲ್ಲ ಎಂದು ನ್ಯಾಯಪೀಠದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಗದ್ಗುರು ಶಂಕರಾಚಾರ್ಯರ ಜಯಂತಿ : ಪಲ್ಲಕ್ಕಿ ಉತ್ಸವ



ದಾವಣಗೆರೆ, ಮೇ 12 - ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಶ್ರೀ ಶಂಕರಾಚಾರ್ಯರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ನಗರದ ರಾಜಬೀದಿಗಳಲ್ಲಿ ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು.

ಉತ್ಸವದಲ್ಲಿ ಮಹಿಳೆಯರಿಂದ ಭಜನೆ, ಪುರುಷರಿಂದ ನೃತ್ಯ, ಭಜನೆ ಹಾಗೂ ವಿಶೇಷವಾಗಿ ಮಧು ಅಣ್ಣ ಮತ್ತು ತಂಡದವರಿಂದ ಚಂಡೇ ವಾದ್ಯ ಈ ಉತ್ಸವಕ್ಕೆ ಮೆರಗು ತಂದಿತು.

ಪಲ್ಲಕ್ಕಿ ಉತ್ಸವದ ನೇತೃತ್ವವನ್ನು ಶ್ರೀ ಶಂಕರ ಸೇವಾ ಸಂಘದ ಉಪಾಧ್ಯಕ್ಷ ಮೋತಿ ಸುಬ್ರಹ್ಮಣ್ಯ, ಕಾರ್ಯದರ್ಶಿ ಶ್ರೀನಿವಾಸ್ ಜೋಶಿ, ಮಾಜಿ ಅಧ್ಯಕ್ಷ ಡಾ. ಎಸ್. ಆರ್. ಹೆಗಡೆ, ಪುರೋಹಿತ ಪುಟ್ಟಸ್ವಾಮಿ, ಸಂಘದ ಸದಸ್ಯರು ವಿನಾಯಕ ಜೋಶಿ, ಸುಬ್ಬಣ್ಣ (ಮಂಡಕ್ಕಿ), ಅನಿಲ್ ಬಾರಂಗಳ್, ಬಾಲಕೃಷ್ಣ ವೈದ್ಯ, ಚೈತನ್ಯ ನಾರಾಯಣಸ್ವಾಮಿ, ರಾಘವೇಂದ್ರ, ಶ್ರೀಕಾಂತ್ ಜೋಶಿ, ರಮೇಶ್ ಪಾಟೀಲ್ ಶ್ರೀಕಾಂತ್ ಕೆ.ಎಂ ಹಾಗೂ ಅನೇಕ ಸದಸ್ಯರುಗಳು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಕನ್ಯಕಾಪರಮೇಶ್ವರಿ ದೇವಿಗೆ ಸೀರೆಗಳಿಂದ ಅಲಂಕಾರ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಇಂದು ಸಂಜೆ 6.30ರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಕನ್ಯಕಾ ಪರಮೇಶ್ವರಿ ಸಂಘದ ಅಧ್ಯಕ್ಷ ಆರ್. ಎಲ್. ಪ್ರಭಾಕರ್ ತಿಳಿಸಿದ್ದಾರೆ.

ವಾಸವಿ ಭಜನಾ ಮಂಡಳಿಯಿಂದ ವಾಸವಿ ಕೋಲಾಟ, ಹಾಡುಗಳೊಂದಿಗೆ ಕೋಲಾಟ ಕಾರ್ಯಕ್ರಮ ನಡೆಯಲಿದೆ ಎಂದು ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ವಿವರಿಸಿದ್ದಾರೆ.

## ರಾಣೇಬೆನ್ನೂರು : ತೇಜಶ್ವಿನಿ ಸಾಲಿ ಪ್ರಥಮ



ರಾಣೇಬೆನ್ನೂರು, ಮೇ 12- ತಾಲ್ಲೂಕಿನ ಹಲಗೇರಿ ಎಚ್.ಎಸ್ ಪ್ರೌಢ ಶಾಲೆಗೆ 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.88ರ ಫಲಿತಾಂಶ ಲಭಿಸಿದೆ. ತೇಜಶ್ವಿನಿ ಸಾಲಿ ಶೇ.91ರಷ್ಟು ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

## ಹರಪನಹಳ್ಳಿ : ಸಿಡಿಲು ಬಡಿದು ಸಾವು

ಹರಪನಹಳ್ಳಿ, ಮೇ 12 - ಗುಡುಗು ಸಿಡಿಲು ಹಾಗೂ ಮಳೆ ಬಂದ ಕಾರಣ ಕಣದಲ್ಲಿನ ಮೇವಿನ ಬಣಿವೆಗೆ ಹೊದಿಕೆ ಹಾಕುವಾಗ ಸಿಡಿಲು ಬಡಿದು ಸ್ಥಳದಲ್ಲೇ ಮೃತ ಪಟ್ಟ ಘಟನೆ ತಾಲ್ಲೂಕಿನ ಅಡವಿ ಮಲ್ಲಾಪುರ ಗ್ರಾಮದಲ್ಲಿ ಜರುಗಿದೆ. ಅಡವಿಮಲ್ಲಾಪುರದ ಚೌಡಪ್ಪ(33) ಮೃತಪಟ್ಟ ವ್ಯಕ್ತಿ. ಎಂದಿನಂತೆ ಮನೆಯ ಪಕ್ಕದಲ್ಲಿರುವ ಬಣಿವಿಗೆ, ಮಳೆ ಬಂತು ಎಂದು ಹೊದಿಕೆ ಹಾಕಲು ಹೋದಾಗ ಏಕಾಏಕಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ.


YOGI RAM
SHASHI EDUCATIONAL TRUST (R.)
LALITHA INTERNATIONAL PUBLIC SCHOOL
Lokikere Main Road, Davangere-577005
Affiliated to CBSE:830769

WANTED TEACHERS

| Sl. No. | SUBJECT | QUALIFICATION | GRADE |
|---|---|---|---|
| 1 | Montessori | Any Degree with NTC/NTT/D.Ed | Pre-Primary |
| 2 | Kannada, English, Hindi, Social Science | B.A. / M.A., B.Ed | Primary |
| 3 | Mathematics, Science | B.Sc / M.Sc, B.Ed | Primary |
| 4 | Kannada, English, Hindi, Social Science | B.A. / M.A. B.Ed | High School |
| 5 | Mathematics, Science | B.Sc / M.Sc, B.Ed | High School |
| 6 | Physical Instructor | B.P.Ed / M.P.Ed | Primary & High School |

Key Notes:
* Minimum 3 years of experience in the respective subject.
* Good fluency in English
* Eligible and interested candidates can come with their resume

Contact No: 7022004109, 9980629965, 7022004042





ಹೃತ್ಪೂರ್ವಕ ಶುಭಾಶಯಗಳು

ಸಿಂಚನ ವೈ.ಜಿ.

610 (97.6%)

ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲೆ ಅನುಭವ ಮಂಟಪ, ದಾವಣಗೆರೆ ವಿದ್ಯಾರ್ಥಿನಿಯಾಗಿದ್ದು, 2023-24ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 610 (97.6%) ಅಂಕಗಳನ್ನು ಗಳಿಸಿದ್ದು, ಅವರಿಗೆ ಶುಭಾಶಯಗಳನ್ನು ಕೋರುತ್ತಿರುವವರು.

ಅಜ್ಜ-ಅಜ್ಜಿಂದಿರಾದ : ಶ್ರೀಮತಿ ಪ್ರೇಮಲೀಲಾ ಜಂಬುಕೇಶ್ವರಯ್ಯನವರು ದಾವಣಗೆರೆ.
ದಿ॥ ಶ್ರೀಮತಿ ಪಾರ್ವತಿ, ಶ್ರೀ ಶಾಂತವೀರಯ್ಯನವರು ಹಿರೇಮಠ ಮತ್ತು ಕುಟುಂದವರು ಅತ್ತಿಗೆರೆ (ಶಿಗ್ಗಾವಿ)
ಶ್ರೀಮತಿ ಗಿರಿಜಮ್ಮ, ದಿ॥ ಶ್ರೀ ಎ.ಎಮ್. ಚಂದ್ರಶೇಖರಯ್ಯನವರು ಮತ್ತು ಕುಟುಂಬದವರು, ದಾವಣಗೆರೆ.
ದೊಡ್ಡಮ್ಮ-ದೊಡ್ಡಪ್ಪರಾದ : ಶ್ರೀಮತಿ ವೀಣಾ, ಶ್ರೀ ವಿಜಯಕುಮಾರ್ ಎಸ್.ಎಂ. ಮತ್ತು ಕುಟುಂಬದವರು ಶಿರಮಗೊಂಡನಹಳ್ಳಿ.
ಶ್ರೀಮತಿ ವಾಣಿಶ್ರೀ ವೈ.ಎಸ್. ದಿ॥ ಶಿವಯೋಗಿ ವೈ.ಜೆ. ದಾವಣಗೆರೆ
ತಾಯಿ-ತಂದೆ : ಶ್ರೀಮತಿ ಸೌಭಾಗ್ಯ ವೈ.ಜಿ., ಶ್ರೀ ಗಿರೀಶ್ ವೈ.ಜೆ., ದಾವಣಗೆರೆ.
ಅಣ್ಣಂದಿರಾದ : ಅಭಿಷೇಕ್ ವೈ.ಎಸ್., ಆಕಾಶ್ ವೈ.ಎಸ್. ದಾವಣಗೆರೆ
ತಂಗಿ : ಅಪೂರ್ವ ವೈ.ಜಿ. ಹಾಗೂ ಎರೇಬೈರಾಪುರ ಮಠದ ಬಂಧು-ಮಿತ್ರರು.



Sri Manasa Education Association (R)
OXFORD ENGLISH MEDIUM HIGH SCHOOL
RMC Road, Anekonda, Davangere - 577001
2023-24 SSLC TOPPERS
* Congratulations to All our Raising Stars *




Best wishes From : Sri Manasa Education Association All Members and Oxford English Medium Pre Primary, Primary, Higher Primary & High School Teaching Staff & Non Taching Staff





ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ (ರಿ.)
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಲ್ಯಾಣ ಮಂಟಪ
ಎಸ್ ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್ ಹತ್ತಿರ, ದಾವಣಗೆರೆ - 577004.



ಮದುವೆ ಮತ್ತು ಶುಭ ಸಮಾರಂಭ ಹಾಗೂ ಇನ್ನಿತರೆ ಕಾರ್ಯಕ್ರಮಗಳಿಗೆ
ಕಲ್ಯಾಣ ಮಂಟಪದ ಕಾಯ್ದಿರಿಸುವಿಕೆ (Booking) ಪ್ರಾರಂಭಿಸಲಾಗಿದೆ.





ನಗರದ ಪ್ರತಿಷ್ಠಿತ ಶ್ರೀ ಬಕ್ಕೇಶ್ವರ ಮಹಾಸ್ವಾಮಿಯ ಕಲ್ಯಾಣ ಮಂಟಪವು ನೂತನವಾಗಿ ನವೀಕರಣಗೊಂಡಿದ್ದು, ಈ ಕೆಳಗಿನ ವೈಶಿಷ್ಟ್ಯಗಳನ್ನು ಒಳಗೊಂಡಿದೆ.

- ಮುಖ್ಯ ಸಭಾಂಗಣವು ಸಂಪೂರ್ಣ ಹವಾ ನಿಯಂತ್ರಣ ವ್ಯವಸ್ಥೆ (A/C) , ಅಕೌಸ್ಟಿಕ್ ವ್ಯವಸ್ಥೆ(Acoustic Sound Proof) ಹಾಗೂ ಅತ್ಯಾಧುನಿಕ ಶೈಲಿಯ ಆಕರ್ಷಕ ಒಳಾಂಗಣ ವಿನ್ಯಾಸ (Interiors) ಹೊಂದಿದೆ.
- ವಿಶಾಲವಾದ ತಂಪಾದ ಗಾಳಿ ವ್ಯವಸ್ಥೆಯ(Fresh Air System) ಊಟದ ಹಾಲ್ ಬಫೆಟ್ ಅಥವಾ ಸೀಟಿಂಗ್ ವ್ಯವಸ್ಥೆಗೆ(Buffet or Seating) ಅನುಕೂಲವಿದೆ.
- ವಧು ಹಾಗೂ ವರನ ಕೊಠಡಿಗಳು ಹವಾ ನಿಯಂತ್ರಣ ವ್ಯವಸ್ಥೆ ಹೊಂದಿವೆ.
- ಕಲ್ಯಾಣ ಮಂಟಪದಲ್ಲಿರುವ ಎಲ್ಲಾ 16 ಕೊಠಡಿಗಳು ಆಧುನಿಕವಾಗಿ ನವೀಕರಣಗೊಂಡಿವೆ.

ಕಾಯ್ದಿರಿಸುವಿಕೆಗೆ (Booking) ಕೂಡಲೇ ಕಲ್ಯಾಣ ಮಂಟಪದ ವ್ಯವಸ್ಥಾಪಕರನ್ನು ಸಂಪರ್ಕಿಸಿರಿ.
ದೂರವಾಣಿ ಸಂಖ್ಯೆ: 08192-220630, 98448 24230


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas